ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 52 ಜನವರಿ 2, 1983 ಬೆಲೆ 60 ಪೈಸೆ

ಸಿ.ಪಿ.ಐ. (ಎಂ) ಉಮೇದ್ವಾರರು :

1) ಕಾಂ। ಪಿ. ರಾಮಚಂದ್ರರಾವ್ ಉಳ್ಳಾಲ ಕ್ಷೇತ್ರ (ದ.ಕ.)

2) ಕಾಂ। ಎಚ್. ಸೂರ್ಯನಾರಾಯಣರಾವ್—ವರ್ತೂರು ಕ್ಷೇತ್ರ (ಬೆಂಗಳೂರು ಜಿಲ್ಲೆ)

3) ಕಾಂ। ಟಿ. ಎಚ್. ಮಣಿ—ಕೆ.ಜಿ.ಎಫ್. ಕ್ಷೇತ್ರ (ಮೀಸಲು) ಕೋಲಾರ ಜಿಲ್ಲೆ

4) ಕಾಂ। ಎ. ವಿ. ಅಪ್ಪಾಸ್ವಾಮಿ ರೆಡ್ಡಿ – ಬಾಗೇಪಲ್ಲಿ „

ಹಾಗೂ

5) ಶ್ರೀ ಆರ್. ವೆಂಕಟರಾಮಯ್ಯ ಮುಳಬಾಗಲು
(ವಿರೋಧ ಪಕ್ಷಗಳ ಬೆಂಬಲಿತ ಅಭ್ಯರ್ಥಿ)

ಇವರೆಲ್ಲರ ಯಶಸ್ವಿಗಾಗಿ ದುಡಿಯಬೇಕೆಂದು ನಮ್ಮ ಕಳಕಳಿಯ ಮನವಿ

ಮತದಾನದ ಮೂಲಕ ಹೊಸ ಚರಿತ್ರೆ ಬರೆಯಿರಿ

ಜನವರಿ 5 ರಂದು ಕರ್ನಾಟಕ, ಆಂಧ್ರ, ತ್ರಿಪುರಾ ರಾಜ್ಯಗಳಲ್ಲಿ ವಿಧಾನ ಸಭೆ ಚುನಾವಣೆಗಳು ನಡೆಯುತ್ತವೆ. ಈ ಚುನಾವಣೆಯಲ್ಲಿ ಕೆಲವು ಆಶ್ಚರ್ಯಕರ ಪ್ರತಿಫಲ ಹೊರಬೀಳಬಹುದು.

ತ್ರಿಪುರದ ಜನತೆ ಕಾಂಗ್ರೆಸ್ ಮತ್ತು ಸಮ್ಮಿಶ್ರ ಸರಕಾರಗಳನ್ನೂ ಹಾಗೆಯೇ ಕಳೆದ 5 ವರ್ಷಗಳಲ್ಲಿ ಸಿ.ಪಿ.ಐ (ಎಂ) ಮುಖಂಡತ್ವದ ಎಡರಂಗ ಸರಕಾರವನ್ನು ಕಂಡಿದ್ದಾರೆ. ಅವುಗಳ ಅನುಭವಗಳನ್ನು ಉಂಡಿದ್ದಾರೆ. ವಿಚ್ಛಿದ್ರಕಾರಿ ಪ್ರಾದೇಶಿಕ ಪಕ್ಷವಾದ ತ್ರಿಪುರ ಉಪಜಾತಿ ಜುಭಾ ಸಮಿತಿಯೊಡನೆ ಕೂಡಿಕೊಂಡು, ಮಿಲಿಟರಿ ಅಧಿಕಾರಿಗಳ ಸಹಾಯದಿಂದ ಇಂದಿರಾ ಗಾಂಧಿ ಪಕ್ಷ ಅಲ್ಲಿ ಸ್ಪರ್ಧಿಸುತ್ತಿದೆ. 1978ರಲ್ಲೇ ಬಂಡವಾಳಶಾಹಿ ಪಕ್ಷಗಳನ್ನೆಲ್ಲ ನೆಲಸಮ ಮಾಡಿದ ತ್ರಿಪುರಾದ ಮತದಾರರು ಈ ಸಲವೂ ಆ ಪಕ್ಷಕ್ಕೆ ಸರಿಯಾದ ಉತ್ತರ ನೀಡುತ್ತಾರೆಂಬ ವಿಷಯದಲ್ಲಿ ಸಂಶಯವಿಲ್ಲ.

ಆಂಧ್ರದಲ್ಲಿ ಎಡಪಕ್ಷಗಳೊಡನೆ ಸೇರಿಕೊಂಡಿದೆ ಜನತಾ ಪಕ್ಷ. ಸಿನಿಮಾ ನಟ ಎನ್. ಟಿ. ರಾಮರಾವ್ ಕೂಡ ಇಂದಿರಾ ಕಾಂಗ್ರೆಸ್ಸಿಗೆ ಪ್ರಭಾವಿತ ಸವಾಲಾಗಿ ನಿಂತಿದ್ದಾರೆ. ಆದ್ದರಿಂದ ಆಂಧ್ರದಲ್ಲಿ ಪ್ರಬಲವಾದ ವಿರೋಧ ಬೆಳೆಯುತ್ತಿದೆ. ಅಲ್ಲಿಯ ರೈತ–ಕಾರ್ಮಿಕ ವರ್ಗ ಇಂದಿರಾ ಪಕ್ಷವನ್ನು ಸೋಲಿಸಲಿಕ್ಕೆ ಸರ್ವವಿಧದಲ್ಲಿ ಪ್ರಯತ್ನ ಮಾಡುತ್ತಾರೆಂದು ಆಶಿಸೋಣ.

ಕರ್ನಾಟಕದಲ್ಲಿಯೂ ಈ ಸಲ ಹಿಂದೆಂದಿಗಿಂತಲೂ ಇಲ್ಲದಂಥಾ ಇಂದಿರಾ ವಿರೋಧಿ ಗಾಳಿ ಎದ್ದಿದೆ. ಮೂರು ವರ್ಷಗಳಲ್ಲಾದ ಗೋಲೀಬಾರು, ಲಾಠಿ ಚಾರ್ಜ್, ಬಂಧನ, ದಬ್ಬಾಳಿಕೆ, ಭ್ರಷ್ಟಾಚಾರಗಳೆಲ್ಲ ಇಂದಿರಾ ಪಕ್ಷವನ್ನು ಜನತೆಯಿಂದ ದೂರ ಮಾಡಿದೆಯೆಂಬ ಸಂಗತಿ ಚುನಾವಣಾ ಪ್ರಚಾರದ ಸಲುವಾಗಿ ಇಂದಿರಾ ಗಾಂಧಿ ನಮ್ಮ ರಾಜ್ಯದಲ್ಲಿ ಪ್ರವಾಸ ಕೈಗೊಂಡಾ ಜನತೆ ತೋರಿಸಿದ ನಿರಾಸೆಯೇ ನಮ್ಮ ಕಣ್ಣು ಮುಂದಿದೆ. ಬೆಂಗಳೂರಿನಲ್ಲಿ ತಮ್ಮ ಎರಡನೇ ಸುತ್ತಿನ ಪ್ರಚಾರದಲ್ಲಿ ಇಂದಿರಾ ಗಾಂಧಿ ಮನೆ ಮನೆಗೆ ಸುತ್ತಾಡಬೇಕಾಯಿತು. ಕೈ ಮುಗಿದು ವಿನಂತಿ ಮಾಡಿಕೊಳ್ಳಬೇಕಾಯಿತು. ಹಾಗೆಯೇ ಹಲವಾರು ದೇವರುಗಳಿಗೆ, ಜಗದ್ಗುರುಗಳಿಗೆ, ಸ್ವಾಮಿಗಳಿಗೆ ಕಾಲು ಬಿದ್ದು ಬೇಡಿಕೊಳ್ಳಬೇಕಾಯಿತು.

ಇಂದಿರಾ ಕಾಂಗ್ರೆಸ್, ಗುಂಡೂರಾವ್ ಸರಕಾರದ ಆಡಳಿತೆಗೆ ಬೇಸತ್ತ ಜನತೆಗೆ ಸಹಾಯ ಮಾಡುವ ಸಲುವಾಗಿ ಜನತಾ ಪಕ್ಷ, ಕ್ರಾಂತಿರಂಗ, ಸಿ.ಪಿ.ಐ., ಸಿ.ಪಿ.ಐ. (ಎಂ) ಪಕ್ಷಗಳು ಒಗ್ಗಟ್ಟಿನಿಂದ ಚುನಾವಣಾ ಕಣದಲ್ಲಿದ್ದು ಜನರಲ್ಲಿ ಧೈರ್ಯ ತುಂಬಿದ್ದಾರೆ.

ಕರ್ನಾಟಕ ಮತದಾರರಲ್ಲುಂಟಾಗಿರುವ ಹೊಸ ತಿಳುವಳಿಕೆ ಇಂದಿರಾ ಗಾಂಧಿಯ ಬಿರುಗಾಳಿಯನ್ನು ತಡೆಯುವ ಭೀಮ ಬಲವನ್ನು ಪಡೆದಿದೆ. ಈ ಹೊಸಶಕ್ತಿ, ಚೈತನ್ಯ ತ್ರಿಪುರಾದಂತೆ ಕರ್ನಾಟಕದಲ್ಲೂ ಜ. 5 ನಡೆಯುವ ಮತದಾನದಲ್ಲಿ ಪ್ರದರ್ಶನವಾಗಲಿ.

ಇಂದಿರಾ ಗಾಂಧಿ ಹಲವಾರು ಕ್ರೂರ ಕಾನೂನುಗಳಿಂದ ಜನರ ಚಳುವಳಿಯನ್ನು ಮೊಟಕುಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಗುಂಡೂರಾಯರು ಗುಂಡಿನಿಂದ ಜನರನ್ನು ಕೊಂದಿದ್ದಾರೆ. ಆದರೆ ಜನವರಿ 5 ರಂದು ಮತದಾರರು ಇಂದಿರಾ ಪಕ್ಷವನ್ನೂ, ಗುಂಡೂರಾವ್ ಸರಕಾರವನ್ನು ತಮ್ಮ ಅಮೂಲ್ಯವಾದ ಮತದಾನದಿಂದ ಕೊಂದು ಹಾಕಬೇಕಾಗಿದೆ. ಹಾಗಾದರೆ ಮಾತ್ರ ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಉಳಿಯಲು, ರೈತ-ಕಾರ್ಮಿಕರ ಹೋರಾಟ ನಡೆದು ಯಶಸ್ವಿಯಾಗಲು ಸಾಧ್ಯ. ಕರ್ನಾಟಕದ ಜನತೆ ಈ ಪವಿತ್ರ ಕಾರ್ಯವನ್ನು ಯಶಸ್ವಿ ರೀತಿಯಿಂದ ಮಾಡಿ ತೋರಿಸುತ್ತಾರೆಂದು ಆಶಿಸುತ್ತೇವೆ. ಆಶ್ಚರ್ಯದಾಯಕ ಸುದ್ದಿಗಳು ಜನವರಿ 6 ರಿಂದ ಬಿತ್ತರಿಸಲ್ಪಡುತ್ತವೆಂದು ಅತ್ಯಾತುರದಿಂದ ನೋಡಲಿಚ್ಛಿಸುತ್ತೇವೆ.

ಕುಡುಗೋಲು, ಸುತ್ತಿಗೆ ನಕ್ಷತ್ರ ಗುರುತಿಗೆ

ನಿಮ್ಮ ಮತ

ಸಂಪಾದಕೀಯ

ಮಿಲಿಟರಿ - ಪೋಲೀಸ್ ಪ್ರವೇಶ

1975ರಲ್ಲಿ ಏಕ ವ್ಯಕ್ತಿ ಸರ್ವಾಧಿಕಾರದ ರುಚಿಕಂಡ ಇಂದಿರಾ ಗಾಂಧಿ. ಜಗತ್ತಿನ ಮತ್ತು ನಮ್ಮ ದೇಶದ ಪ್ರಜಾಪ್ರಭುತ್ವವಾದಿ ಜನತೆಯ ಒತ್ತಡಕ್ಕೆ ಬಲಿಯಾಗಿ 1977ರಲ್ಲಿ ಚುನಾವಣೆ ನಡೆಸಿದರು. ಆಗ ಜನತೆ ಅವರ ಸರ್ವಾಧಿಕಾರತ್ವವನ್ನು ಮಣ್ಣು ಮುಕ್ಕಿಸಿತು. ಆದರೆ ಜನತಾ ಸರಕಾರ ಬಂಡವಾಳಶಾಹಿ ಪರ ನೀತಿಯನ್ನೇ ಅನುಸರಿಸಿ ಬಂದುದರಿಂದ 1980ರ ಚುನಾವಣೆಯಲ್ಲಿ ಮತ್ತೆ ಇಂದಿರಾ ಗಾಂಧಿ ಜನತೆಗೆ ಮೋಸದ ಮಾತುಗಳನ್ನು ಹೇಳಿ ಆರಿಸಿ ಬಂದರು.

ಕಳೆದ 3 ವರ್ಷಗಳಲ್ಲಿ ಎಲ್ಲ ವಿಭಾಗಗಳ ಜನತೆ ಇಂದಿರಾ ಗಾಂಧಿಯ ಆಡಳಿತೆಯ ವಿರುದ್ಧ, ಅದರ ಜನ ವಿರೋಧಿ ನೀತಿಯ ವಿರುದ್ಧ ಐಕ್ಯ ಹೋರಾಟ ನಡೆಸುತ್ತ ಬಂದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಲ್ಲ ವಿರೋಧ ಪಕ್ಷಗಳನ್ನು ಒಟ್ಟಿಗೆ ಸೇರಿಸಿ ಸಂಯುಕ್ತ ಹೋರಾಟಕ್ಕೆ ಚಾಲನೆ ಕೊಟ್ಟಿದೆ, ಚಳುವಳಿಗಳನ್ನು ಯಶಸ್ವಿಗೊಳಿಸಿದೆ.

ಜನರ ಐಕ್ಯ ಹೋರಾಟದಿಂದ ದಿಗಿಲುಗೊಂಡ ಇಂದಿರಾ ಗಾಂಧಿ ಮತ್ತೆ ಸರ್ವಾಧಿಕಾರದತ್ತ ಸಾಗಿದಂತೆ ಕಂಡು ಬರುತ್ತದೆ. ಆದರೆ ಈಗಿನ ಅವರ ವರ್ತನೆ 1975ಕ್ಕಿಂತ ಬೇರೆ ರೀತಿಯದ್ದಾಗುವಂತೆ ಕಂಡು ಬರುತ್ತದೆ.

ಮಿಲಿಟರಿ ಮತ್ತು ಪೋಲೀಸ್ ಅಧಿಕಾರಿಗಳನ್ನು ಚುನಾವಣೆಯಲ್ಲಿ ಉಪಯೋಗಿಸಲು, ವಿರೋಧ ಪಕ್ಷಗಳನ್ನೂ, ಮತದಾರರನ್ನೂ ಅಂಜಿಸಲು ತ್ರಿಪುರದಲ್ಲಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡರಂಗ ಸರಕಾರದ ವಿರುದ್ಧ ಪ್ರಚಾರ ಮಾಡಲು ಉಪಯೋಗಿಸುತ್ತಿದ್ದಾರೆ. ಕರ್ನಾಟಕದಲ್ಲಿ ಡಿ.ಐ.ಜಿ. (ಇಂಟೆಲಿಜನ್ಸಿ) ಶ್ರೀ ಕಾರ್ತಿಕೇಯನ್, ತ್ರಿಪುರಾದಲ್ಲಿ ಪೂರ್ವಭಾಗದ ಕಮಾಂಡಿನ ಜಿ.ಓ.ಸಿ. ಲೆ॥ ಜನರಲ್ ವೈದ್ಯ ಇವರ ಚಟುವಟಿಕೆಗಳು, ಸ್ವತಂತ್ರ ರೀತಿಯಿಂದ, ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಸಲಿಕ್ಕೆ ಆತಂಕಕಾರಿಯಾಗಿದೆ. ಅಷ್ಟೇ ಅಲ್ಲದೆ ನಮ್ಮ ದೇಶದ ಸಂವಿಧಾನಕ್ಕೆ ವಿರೋಧವಾಗಿದೆ. ಪೋಲೀಸರ, ಮಿಲಿಟರಿಯವರ ಸಹಾಯದಿಂದ ತನ್ನ ಸರ್ವಾಧಿಕಾರವನ್ನು ಜನತೆಯ ಮೇಲೆ ಹೇರುವ ಭಯಾನಕ ಒಳಸಂಚನ್ನು ಇಂದಿರಾ ಗಾಂಧಿಯವರು ಅನುಸರಿಸುವಂತೆ ಕಂಡು ಬರುದೆ.

ಚುನಾವಣೆಗಳಲ್ಲಿ ಪೋಲೀಸರ–ಮಿಲಿಟರಿ ಅಧಿಕಾರಿಗಳ ಪ್ರವೇಶ ಬಹಳ ಅಪಾಯಕಾರಿಯಾಗಿದೆ. ಜನತೆ ಇಂದಿರಾ ಗಾಂಧಿಯ ಈ ಅಪಾಯಕಾರಿ ನೀತಿಯನ್ನು ಬಲವಾಗಿ ವಿರೋಧಿಸಲೇಬೇಕು. ಜನವರಿ 5 ರಂದು ಮತದಾನದ ಮೂಲಕ ಅದನ್ನು ತೋರಿಸಿಕೊಡಬೇಕು

ಸಿ. ಪಿ. ಐ. (ಎಂ), ಸಿ. ಪಿ. ಐ., ಜನತಾ ಮತ್ತು ಕ್ರಾಂತಿರಂಗ ಅಭ್ಯರ್ಥಿಗಳಿಗೆ ಮತ ನೀಡಿ

ಸರ್ವಾಧಿಕಾರಿ ಶಕ್ತಿಗಳನ್ನು ಹಿಮ್ಮೆಟ್ಟಿಸಿ—ಪ್ರಜಾಪ್ರಭುತ್ವ ಉಳಿಸಿ

ಎರಡನೆಯ ಇಪ್ಪತ್ತಂಶದ ಕಾರ್ಯಕ್ರಮ ಮತ್ತು ರೈತಾಪಿ ವರ್ಗ

–ಕಾಂ| ಬಿ. ಟಿ. ರಣದಿವೆ

ಬೂರ್ಜ್ವಾ–ಭೂ ಮಾಲೀಕರ ಸರಕಾರ ಎಷ್ಟು ತೀವ್ರ ಒತ್ತಡಗಳೊಂದಿಗೆ ಕೆಲಸ ಮಾಡುತ್ತದೆ ಎನ್ನುವುದನ್ನು ಇಂದಿರಾ ಗಾಂಧಿಯವರ ಹೊಸ 20 ಅಂಶಗಳ ಕಾರ್ಯಕ್ರಮ ಎತ್ತಿ ತೋರಿಸುತ್ತದೆ. ತುರ್ತು ಪರಿಸ್ಥಿತಿ ಕಾಲದಲ್ಲಿ ಬಡವರ ಉದ್ಧಾರದ ಘೋಷಣೆಯ ಸೋಗು ಹಾಕಿ ಜನರನ್ನು ನಂಬಿಸಲು 20 ಅಂಶಗಳ ಕಾರ್ಯಕ್ರಮವನ್ನು ಬಳಸಲಾಯಿತು. 1975ರಲ್ಲಿ ಮೊದಲು 20 ಅಂಶದ ಕಾರ್ಯಕ್ರಮವನ್ನು ಜಾರಿಗೆ ತಂದಾಗ ರೈತಾಪಿ ಸಮೂಹವನ್ನು ಆಕರ್ಷಿಸಲು ಒಂದು ಘೋಷಣೆ ಇಂದಿರಾಗೆ ಬೇಕಾಗಿತ್ತು. ಜನತೆಯ ಬಡತನವನ್ನು ಹೋಗಲಾಡಿಸಲು, ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸಲು 20 ಅಂಶಗಳನ್ನು ತರಲಾಗಿದೆಯೆಂದು ಹೇಳಿದರು. ಭೂಸುಧಾರಣೆ, ಭೂ ವಿತರಣೆ, ಕನಿಷ್ಠ ಕೃಷಿಕ ವೇತನ, ಜೀತದಾಳುಗಳ ಬಗ್ಗೆ ಮೊದಲ 20 ಅಂಶಗಳಲ್ಲಿ ಪ್ರಾಧಾನ್ಯತೆ ಇತ್ತು. ಕಾರ್ಮಿಕ ವರ್ಗದ ಬಗ್ಗೆ ಈ ಕಾರ್ಯಕ್ರಮದಲ್ಲಿ ಏನೂ ಹೇಳಿರಲಿಲ್ಲವಾದರೂ ಒಂದು ಆಮಿಷವನ್ನು ಒಡ್ಡಲಾಗಿತ್ತು. ಆಡಳಿತದಲ್ಲಿ ಭಾಗವಹಿಸುವ ಬಗ್ಗೆಯ ಆಮಿಷವೇ ಅದಾಗಿತ್ತು.

ಆದರೆ ಈಗ ಎಲ್ಲಾ ಬದಲಾಗಿದೆ. ಈ ಹೊಸ 20 ಅಂಶಗಳ ಘೋಷಣೆಯಾಗುವಾಗ ಪರಿಸ್ಥಿತಿ ತುಂಬಾ ಬದಲಾಗಿದೆ. ಈಗ ಇಂದಿರಾ ಗಾಂಧಿಗೆ ಸಂಸತ್ತಿನಲ್ಲಿ ಬಹುಮತವಿದೆ.

ಬದಲಾದ ಪರಿಸ್ಥಿತಿಯಲ್ಲಿ ಬಂದ ಹೊಸ 20 ಅಂಶಗಳ ಕಾರ್ಯಕ್ರಮದಲ್ಲಿ ಗ್ರಾಮೀಣ ಸಾಲದ ಬಗ್ಗೆ, ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಬಗ್ಗೆ ಚಕಾರವೆತ್ತಿಲ್ಲ. ಜೀತದಾಳುಗಳು ಹಿಂದುಳಿದವರು, ಹರಿಜನರ ಬಗ್ಗೆ ಹೆಸರಿಸಲಾಗಿದೆಯಾದರೂ ಅವರ ಬಗೆಗಿನ ಕಾಳಜಿ ಎಷ್ಟಿದೆಯೆಂದು ನಮಗೆ ತಿಳಿದೇ ಇದೆ. ದುರ್ಬಲ ವರ್ಗಗಳ ಮೇಲೆ ಎಷ್ಟೇ ಖರ್ಚು ಮಾಡಿದೆಯೆಂದು ಹೇಳಲಾದರೂ ಅದು ಅವರ ಬಡತನವನ್ನು ಹೋಗಲಾಡಿಸೀತೇ ?

ಕಾಲ ಬದಲಾದಂತೆ ತೀವ್ರತೆ ಕಡಿಮೆಯಾಗುವುದು ಎನ್ನುವುದು ಕಾಂಗ್ರೆಸ್ ಸರ್ಕಾರಕ್ಕೆ ಸರಿ ಎನಿಸುತ್ತದೆ. ಇದೇ ಕಾಂಗ್ರೆಸ್ ಸರ್ಕಾರಕ್ಕೆ ಭೂ ಸುಧಾರಣೆ ಬಗ್ಗೆ, ಭೂಮಿ ವಿತರಣೆ ಬಗ್ಗೆ ಇದ್ದ ತೀವ್ರತೆ ಈಗಿಲ್ಲ. ವರ್ಷದಿಂದ ವರ್ಷಕ್ಕೆ ಹಂಚಬೇಕಾದ ಅಧಿಕೃತ ಭೂಮಿಯ ಸಂಖ್ಯೆ ಕಡಿಮೆಯಾಗುತ್ತಿದೆ. 30 ವರ್ಷಗಳ ಕಾಂಗ್ರೆಸ್ ಆಳ್ವಿಕೆಯ ನಂತರವೂ "ಭೂಮಿ ಕಾನೂನಿನ ದಾಖಲೆಗಳ ಬಗ್ಗೆ ಇರುವ ಅಡಚಣೆಗಳನ್ನು ನಿವಾರಿಸಬೇಕು" ಎಂದು ಹೊಸ 20 ಅಂಶಗಳ ಕಾರ್ಯಕ್ರಮದಲ್ಲಿ ಹೇಳಿರುವುದು ಎಷ್ಟು ಹಾಸ್ಯಾಸ್ಪದ.

ಭೂ ಮಾಲೀಕ ಬಂಡವಾಳಿಗರ ರಕ್ಷಣೆ

ಭೂ ಮಾಲೀಕರ ಏಕಸ್ವಾಮ್ಯವನ್ನು ಮುರಿಯಲು ಸರ್ಕಾರ ಸಿದ್ಧವಿಲ್ಲ ಮತ್ತು ಭೂ ಸುಧಾರಣೆಯ ಮಾತು ಎಷ್ಟು ಬೂಟಾಟಿಕೆಯದು ಎಂದು ಇದರಿಂದ ಸ್ಪಷ್ಟವಾಗುತ್ತದೆ. 6ನೇ ಯೋಜನೆಯಲ್ಲಿ ಅಧಿಕ ಭೂಮಿಯ ವಿತರಣೆಯ ಗುರಿ 52.79 ಲಕ್ಷ ಎಕ್ರೆಯಾಗಿದೆ. ಮಿಲಿಯಗಟ್ಟಲೆ ಭೂಮಿ ಹಂಚಿಕೆಯಾಗಬೇಕಿರುವಾಗ ಈ ಗುರಿ ಎಷ್ಟು ಅಲ್ಪ ಪ್ರಮಾಣದ್ದು!

30 ಅಥವಾ 40 ಎಕ್ರೆಗೆ ಮೇಲ್ಪಟ್ಟು ಭೂಮಿ ಹೊಂದಿರುವವರನ್ನು 5 ಎಕ್ರೆಗೆ ಮೇಲ್ಪಟ್ಟು ಹೊಂದಿರುವವರಿಗೆ ಹೋಲಿಸುವುದನ್ನು ಪ್ರಪಂಚದ ಬೇರೆಲ್ಲೂ ನಾವು ಕಾಣುವುದಿಲ್ಲ. ಸಣ್ಣ ಮತ್ತು ಮಧ್ಯಮ ರೈತರಿಗೆ ಹೊರೆ ಹೊರಿಸಿ ದೊಡ್ಡ ಭೂ ಮಾಲಿಕರನ್ನು ರಕ್ಷಿಸುವುದು ನಮ್ಮ ಭಾರತದಲ್ಲಿ ಮಾತ್ರ.

ಇದೇ ರೀತಿಯ ಉದ್ದೇಶವನ್ನು ವೇತನ ಮತ್ತು ಆದಾಯ ನೀತಿಯಲ್ಲೂ ಕಾಣುತ್ತೇವೆ. ದೊಡ್ಡ ಬಂಡವಾಳಿಗರ ಲಾಭವನ್ನು ಕಡಿಮೆ ಮಾಡುವುದರ ಬದಲು, ಅಥವಾ ಕಾರ್ಮಿಕರ ವೇತನವನ್ನು ಹೆಚ್ಚಿಸುವ ಬದಲು, ಸರ್ಕಾರ ಏನೆನ್ನುತ್ತದೆ ಎಂದರೆ ವೇತನ ವ್ಯತ್ಯಾಸವನ್ನು ಕಡಿಮೆ ಮಾಡಲು ಹೆಚ್ಚು ವೇತನ ಪಡೆಯುವವರ ಸಂಬಳ ಕಡಿತ ಮಾಡುತ್ತಿದೆ.

ಭೂ ಮಾಲೀಕರನ್ನು, ಬಂಡವಾಳಿಗರನ್ನು ರಕ್ಷಿಸುವುದು ಶೋಷಿತರೊಳಗೆ ತಿಕ್ಕಾಟ ಹಚ್ಚಿಸುವುದು, ಇದು ಬಡತನ ನಿವಾರಿಸುವ ಯೋಜಕರ ಕ್ರಮ!

ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಬೇಕಾದ ಅಗತ್ಯತೆ ಇಂದು ಜಾಸ್ತಿಯಾಗಿದೆ. ಬಿಹಾರ ಮುಂತಾದೆಡೆ ಕೃಷಿ ಕಾರ್ಮಿಕರ ಮೇಲಿನ ದಬ್ಬಾಳಿಕೆ ಹೆಚ್ಚಿದೆ. ಈ ಬಗ್ಗೆ ಕಾಂಗ್ರೆಸ್ ಸರ್ಕಾರ ಗಂಭೀರವಾಗಿಲ್ಲವೆನ್ನುವುದಕ್ಕೆ ಈ ಬಗ್ಗೆ ಕೇವಲ 2.5 ಕೋಟಿ ರೂ. ಯನ್ನು ತೆಗೆದಿರಿಸಿರುವುದೇ ತೋರಿಸುತ್ತದೆ.

ಬೆಲೆಯೇರಿಕೆಯಿಂದಾಗಿ ಗ್ರಾಮೀಣ ಸಾಲ ಹೆಚ್ಚುತ್ತಿದೆ. 1975 ರಲ್ಲಿ ಋಣ ಪರಿಹಾರದ ನಾಟಕ ಮಾಡಲಾಯಿತು. ಈಗ ಆ ನಾಟಕವೂ ಇಲ್ಲ ಮತ್ತು ಸಮಸ್ಯೆಯನ್ನು ಗುರುತಿಸಿಯೂ ಇಲ್ಲ. ಲೇವಾದೇವಿಗಾರರ ಸಾಲವಲ್ಲದೆ ಸಹಕಾರಿ ಸಂಘಗಳ ಸಾಲದ ಹೊರೆಯೂ ಗ್ರಾಮೀಣ ಜನತೆ ಮೇಲಿದೆ. ರೈತಾಪಿ ಜನರ ಒಡವೆ, ಮನೆ–ಆಸ್ತಿಪಾಸ್ತಿಗಳು ಜಪ್ತಾಗುತ್ತಿವೆ. ಹೀಗಿರುವಾಗ ಇಂದಿರಾ ಸರ್ಕಾರ ಹೇಗೆ ಈ ಸಮಸ್ಯೆಯನ್ನು ಹೊಸ 20 ಅಂಶದಲ್ಲಿ ಸೇರಿಸೀತು ?

ಜೀತದಾಳುಗಳ ಸಮಸ್ಯೆಯನ್ನು ಹೊಸ 20 ಅಂಶದಲ್ಲಿ ಸೇರಿಸಿರುವುದು ಅವರ ಪುಣ್ಯ ಎನ್ನಬಹುದು. 1975 ರಲ್ಲಿ ಅನೇಕ ಕಾಂಗ್ರೆಸ್ ಸರ್ಕಾರಗಳು ತಮ್ಮ ರಾಜ್ಯದಲ್ಲಿ ಜೀತದಾಳುಗಳು ಇಲ್ಲವೆಂದು ಹೇಳಿಕೊಂಡರೂ ಈಗ ಜೀತದಾಳುಗಳನ್ನು ಅನೇಕ ರಾಜ್ಯಗಳಲ್ಲಿ ಗುರುತಿಸಲಾಗಿದೆ. ದೆಹಲಿಯಲ್ಲೇ ಜೀತದಾಳುಗಳನ್ನು ಕಾಣಬಹುದು. ಇವರುಗಳು ರೈತಾಪಿ ವರ್ಗದಲ್ಲಿ ಅತೀ ಹೆಚ್ಚಿನ ಶೋಷಣೆಗೆ ಒಳಗಾದವರು.

ಕಾರ್ಮಿಕ ಹಕ್ಕುಗಳ ದಮನ

ಆಡಳಿತದಲ್ಲಿ ಕಾರ್ಮಿಕರ ಪ್ರತಿನಿಧಿತ್ವದ ಬಗ್ಗೆ ಮೊದಲಿನ 20 ಅಂಶಗಳ ಕಾರ್ಯಕ್ರಮದಲ್ಲಿ ಹೇಳಲಾಗಿತ್ತು. ಈಗಿನ ಹೊಸ ಕಾರ್ಯಕ್ರಮದಲ್ಲಿ ಇದಿಲ್ಲ. ಮೊದಲು ಇದೊಂದು ಬರಿಯ ರಾಜಕೀಯ ಘೋಷಣೆಯಾಗಿತ್ತು. ಕೇವಲ 112 ಕ್ಷೇತ್ರಗಳಲ್ಲಿ ಮಾತ್ರ ಒಂದಾನೊಂದು ರೀತಿಯಲ್ಲಿ ಕಾರ್ಮಿಕರು ಆಡಳಿತದಲ್ಲಿ ನೆಪ ಮಾತ್ರಕ್ಕೆ ಭಾಗವಹಿಸಿದ್ದರು. ಇದಕ್ಕೆ ಖಾಸಗಿ ಕ್ಷೇತ್ರದ ಮಾಲಿಕರಿಂದ ಪ್ರಬಲ ವಿರೋಧವಿತ್ತು. ಹೀಗಾಗಿ ಈಗ ಪ್ರಚಾರ ಮಾಡಲು ಈ ಅಂಶವನ್ನು ಬಳಸಲಿಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಹೊಸ ಯೋಜನೆಯಲ್ಲಿ ಕೈಬಿಡಲಾಗಿದೆ. ಅದೂ ಅಲ್ಲದೆ ಕಾರ್ಮಿಕರ ಹಕ್ಕುಗಳ ಮೇಲೆ ಸತತವಾಗಿ ಧಾಳಿ ನಡೆದಿದೆ. ಐ. ಎಂ. ಎಫ್ ನ ನಿಯಮಗಳ ಪ್ರಕಾರವೂ ಕಾರ್ಮಿಕರ ಹಕ್ಕು ದಮನವಾಗುತ್ತಿದೆ. ಇಂತ ಸಂದರ್ಭದಲ್ಲಿ ಕಾರ್ಮಿಕರು ಹೆಚ್ಚು ಕೇಳದೆ ಹೆಚ್ಚು ಉತ್ಪಾದಿಸಬೇಕೆಂದು ಸರ್ಕಾರ ಬಯಸಿದೆ.

ಭೂಹೀನ ಸಂಸಾರಗಳಿಗೆ ಮನೆ ನಿವೇಶನವನ್ನು ಒದಗಿಸುವ ಅಂಶ ಹೊಸ ಕಾರ್ಯಕ್ರಮದಲ್ಲಿದೆ. ಇದು ತೀರಾ ತುರ್ತಿನ ಅವಶ್ಯಕತೆಯಾಗಿದ್ದು, ಸರಿಯಾಗಿ ಜಾರಿಗೆ ತಂದಲ್ಲಿ ತುಂಬಾ ಪ್ರಯೋಜನಕಾರಿಯಾಗಬಹುದು.

ಆದರೆ ಈ ಭರವಸೆಯಿಂದ ಹೆಚ್ಚಿನದೇನನ್ನೂ ನಿರೀಕ್ಷಿಸುವಂತಿಲ್ಲ. ಸಚಿವಾಲಯದ ಪ್ರಕಟಣೆಯ ಪ್ರಕಾರ ಹಂಚಬೇಕಾಗಿರುವ ನಿವೇಶನಗಳು—

1982–83ರ ಗುರಿ :	ಅಖಿಲ ಭಾರತ	— 11,16,000
	ರಾಜ್ಯಗಳು	— 10,83,400
ಸಾಧನೆ — ಏಪ್ರಿಲ್ – ಜೂನ್		— 72,776

ಈ ನಿವೇಶನಗಳು ಎಲ್ಲಿರುತ್ತವೆ, ಮತ್ತು ಹಂಚಿಕೆಯಾದ ಮೇಲೆ ಅವುಗಳ ಗತಿ ಏನು ಎಂಬುದು ಎಲ್ಲರಿಗೂ ತಿಳಿದ ವಿಷಯ. ಈ ಬಗೆಗಿನ ಅಂಕಿ ಅಂಕಗಳಲ್ಲಿ ಅತಿಶಯೋಕ್ತಿಯನ್ನು ನಾವು ಕಾಣುತ್ತೇವೆ.

ಅರಣ್ಯ ಸಂಪತ್ತಿನ ಲೂಟಿ

ಈಗ 12ನೇ ಅಂಶವನ್ನು ನೋಡೋಣ. ಇದು ಅರಣ್ಯ ಸಂಪತ್ತಿನ ಕುರಿತಾದುದು. ಅರಣ್ಯವನ್ನು ರಕ್ಷಿಸುವುದು ಮುಖ್ಯ ಕೆಲಸ ಎನ್ನುವುದರ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ. ಆದರೆ ಸರ್ಕಾರದ ಹೊಸ ಮಸೂದೆಯ ಪ್ರಕಾರ ಅರಣ್ಯ ಅಧಿಕಾರಿಗಳಿಗೆ ವಿಶೇಷ ಅಧಿಕಾರಗಳನ್ನು ಕೊಟ್ಟು ಆದಿವಾಸಿ ರೈತರನ್ನು ಕಾಡುಗಳಿಂದ ಹೊರ ಹಾಕುವ ಸನ್ನಾಹ ನಡೆದಿದೆ. ಕಾಂಗ್ರೆಸ್ (ಐ) ಹಿಂಬಾಲಕರಿಗೆ ಅರಣ್ಯವನ್ನು ಲೂಟಿ ಹೊಡೆಯುವ ಅವಕಾಶ ದೊರಕಿದೆ. ಇದು ಸರಕಾರದ ಅರಣ್ಯ ರಕ್ಷಣಾ ಯೋಜನೆ!!!

10ನೇ ಅಂಶದ ಪ್ರಕಾರ ಕೊಳಚೆ ಪ್ರದೇಶದ ನಿರ್ಮೂಲನ (ಸ್ಲಮ್) ದುರ್ಬಲ ವರ್ಗದವರಿಗೆ ಮನೆಗಳು ಮತ್ತು ಭೂಮಿಯ ಬೆಲೆ ಏರಿಕೆ ತಡೆಗಟ್ಟುವುದು, ಇವು ಸೇರಿವೆ. ಇಂದಿನ ಪರಿಸ್ಥಿತಿಯಲ್ಲಿ ಭೂಮಿಯ ಬೆಲೆ ಏರಿಕೆ ತಡೆಗಟ್ಟುವುದು ಸರ್ಕಾರಕ್ಕೆ ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿದೆ. ಕೊಳಚೆ ಪ್ರದೇಶಗಳ ನಿವಾರಣೆಯ ಬದಲು ಅವುಗಳನ್ನು ಸುಧಾರಿಸುವ ಕ್ರಮ ಈಗ ಕೈಗೊಳ್ಳಲಾಗಿದೆ. ಕಡಿಮೆ ವೆಚ್ಚದ ಚರಂಡಿ ಯೋಜನೆ, ಮುಂತಾದವುಗಳ ಮೂಲಕ ಈ ಅಂಶವನ್ನು ಜಾರಿಗೆ ತರಲಾಗುವುದು. ಕೊಳಚೆ ಪ್ರದೇಶದ ಬಡವರನ್ನು ಅಮಾನವೀಯವಾಗಿ ಪಟ್ಟಣದ ಹೊರಗಡೆ ಸಾಗಿಸುವುದು ನಡೆಯುತ್ತಲೇ ಇದೆ. ಹೀಗಿರುವಾಗ ಸುಧಾರಣೆಯ ಸೋಗು ಏಕೆ? 6ನೇ ಯೋಜನೆಯ ಪ್ರಕಾರ "1985ರ ಹೊತ್ತಿಗೆ ಕೊಳಗೇರಿ ನಿವಾಸಿಗಳ ಸಂಖ್ಯೆ 33.1 ಮಿಲಿಯಕ್ಕೇರುವ ಅಂದಾಜಿದೆ." ಇವರಲ್ಲಿ ಕೇವಲ 29 ಲಕ್ಷ ಜನರಿಗೆ ಮಾತ್ರ ಮನೆ ಒದಗಿಸುವ ಕ್ರಮ ಕಾಂಗ್ರೆಸ್ (ಐ) ಸರ್ಕಾರದ್ದು. ಉಳಿದವರ ಗತಿ ?

17ನೇ ಅಂಶದಲ್ಲಿ 'ಮೂಲಭೂತ ವಿದ್ಯಾಭ್ಯಾಸವನ್ನು ಎಲ್ಲರಿಗೂ ಒದಗಿಸುವುದು ಮತ್ತು ವಯಸ್ಕರ ಶಿಕ್ಷಣದ ಬಗ್ಗೆ" ಹೇಳಿದೆ. ರೈತರ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದು ಗ್ರಾಮೀಣ ಅಭಿವೃದ್ಧಿಯ ದೃಷ್ಟಿಯಿಂದ ತುಂಬಾ ಅವಶ್ಯ. ಈ ಬಗ್ಗೆ ಕಾಂಗ್ರೆಸ್ ಸರ್ಕಾರ ಮಾತಿನಲ್ಲಿ ಉಚ್ಚರಿಸುತ್ತಾ ಆಚರಣೆಯಲ್ಲಿ ಮಾತ್ರ ನಿರುಪಯೋಗಿಯಾಗಿದೆ. ಮಿಲಿಯಗಟ್ಟಲೆ ಮಕ್ಕಳು ವಿದ್ಯಾಭ್ಯಾಸದ ಮೊದಲ ವರ್ಷದಲ್ಲಿ ಶಾಲೆಯಿಂದ ಹೊರಬರುತ್ತಾರೆ. ಆರ್ಥಿಕ ಕಾರಣಗಳಿಂದ ಶಾಲೆಯ ಎರಡನೇ ವರ್ಷದಲ್ಲಿ ವಿದ್ಯಾಭ್ಯಾಸ ನಿಲ್ಲಿಸುವ ಮಕ್ಕಳ ಸಂಖ್ಯೆಯೂ ಅಧಿಕವಾಗಿದೆ. ಬಡತನದ ರೇಖೆಯಿಂದ ಕೆಳಗೆ ನರಳುವ ರೈತಾಪಿ ಜನರ ಮಕ್ಕಳು ವಿದ್ಯಾಭ್ಯಾಸವನ್ನು ಪಡೆಯುವುದಾದರೂ ಹೇಗೆ ?

ಹುಸಿ ನೀರಾವರಿ ಭರವಸೆ

1ನೇ ಅಂಶದಲ್ಲಿ 'ನೀರಾವರಿ' ಬಗ್ಗೆ ಹೇಳಲಾಗಿದೆ. ಬುದ್ಧಿವಂತನಾದ ಯಾವುದೇ ರೈತ ಕಾಂಗ್ರೆಸ್‌ನ ನೀರಾವರಿ ಕುರಿತ ಭರವಸೆಯನ್ನು ನಂಬಲಾರ. ನೀರಾವರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ನಿಧಾನವಾದ ಪ್ರಗತಿಯಿಂದ ಆಶೆ ಹುಟ್ಟುವುದಿಲ್ಲ. 5ನೇ ಯೋಜನೆಯಲ್ಲಿ 10 ಸಾವಿರ ಕೋಟಿ ಖರ್ಚು ಮಾಡಲಾಯಿತು. ಇಷ್ಟಾದರೂ ಇದುವರೆಗೆ ಕೇವಲ 26.6% ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. 6ನೇ ಯೋಜನೆಯಲ್ಲಿ ಮತ್ತೆ 10 ಸಾವಿರ ಕೋಟಿ ವ್ಯಯಮಾಡಿ ನೀರಾವರಿ ಸೌಲಭ್ಯವನ್ನು 50% ಭೂಮಿಗೆ ಒದಗಿಸುತ್ತೇವೆಂದು ಹೇಳಿಕೊಂಡಿರುವುದನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದಿಲ್ಲ. ರಾಜಸ್ತಾನ್ ಕಾಲುವೆಯನ್ನು 15 ವರ್ಷಗಳ ಹಿಂದೆಯೇ ಮುಗಿಸಬೇಕಾಗಿತ್ತು. ಇದೊಂದೇ ಉದಾಹರಣೆಯಲ್ಲ ಇದೇ ರೀತಿ 50ಕ್ಕೂ ಮಿಕ್ಕಿ ನೀರಾವರಿ ಯೋಜನೆಗಳು 10 ವರ್ಷಕ್ಕೂ ಮಿಕ್ಕಿ ನಿಧಾನಗತಿಯಿಂದ ಸಾಗಿವೆ.

11ನೇ ಅಂಶದಲ್ಲಿ ವಿದ್ಯುತ್ ಶಕ್ತಿಯ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಹೇಳಲಾಗಿದೆ. ಕೈಗಾರಿಕೆ ಮತ್ತು ವ್ಯವಸಾಯ ಎರಡಕ್ಕೂ ವಿದ್ಯುತ್‌ನ ಬಳಕೆಯ ಅಗತ್ಯ ಹೆಚ್ಚಿದೆ. 6ನೇ ಯೋಜನೆಯಲ್ಲಿ 19647 ಮೆಗಾವಾಟ್ ಅಧಿಕ ಶಕ್ತಿ ಉತ್ಪಾದಿಸುವ ಗುರಿ ಇದೆ. ಆದರೆ ಯೋಜನೆಯ ಮೊದಲ 2 ವರ್ಷಗಳಲ್ಲಿ ಕೇವಲ 4024 ಮೆ.ವಾ. ಶಕ್ತಿ ಉತ್ಪಾದಿಸಲಾಗಿದೆ. ಈಗಿನ ವರದಿಯ ಪ್ರಕಾರ ಶಕ್ತಿ ಉತ್ಪಾದನೆಯ ಗುರಿಯನ್ನು ಕಡಿತ ಮಾಡಲಾಗಿದೆ. ಹೇಗಿದೆ ಶಕ್ತಿ ಹೆಚ್ಚಳದ ಕ್ರಮ ? ಹೊಸ 20 ಅಂಶಗಳನ್ನು ಆಧಾರವಾಗಿಟ್ಟುಕೊಂಡಿರುವ ಯೋಜನಕಾರರು ಎಷ್ಟು ಗಂಭೀರವಾಗಿದ್ದಾರೆಂದು ಈ ಕೆಳಗಿನ ಅಂಕಿಗಳು ತಿಳಿಸುತ್ತವೆ. 1982–83ಕ್ಕೆ 4,18,737 ಪಂಪ್ ಸೆಟ್ಟುಗಳಿಗೆ ಶಕ್ತಿ ಒದಗಿಸುವ

(7ನೇ ಪುಟ ನೋಡಿ)

ಶ್ರೀಮತಿ ಗಾಂಧಿಯವರಿಗೆ ಪತ್ರ

[ಕಾಂಗ್ರೆಸ್ (ಐ) ಪಕ್ಷ ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ತ್ರಿಪುರಾ ಉಪಜಾತಿ ಜುಬಾ ಸಮಿತಿಯೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡಿರುವುದರ ಕುರಿತು ತ್ರಿಪುರಾದ ಮುಖ್ಯಮಂತ್ರಿ ಕಾ|| ನೃಪೇನ್ ಚಕ್ರವರ್ತಿ ಅವರು ಶ್ರೀಮತಿ ಗಾಂಧಿಯವರಿಗೆ ಬರೆದಿರುವ ಪತ್ರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.]

ಶ್ರೀಮತಿ ಇಂದಿರಾ ಗಾಂಧಿ ಅವರಿಗೆ,

ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸಲು ತ್ರಿಪುರಾದ ಉಪಜಾತಿ ಜುಬಾ ಸಮಿತಿಯೊಂದಿಗೆ (TUJS) ರಾಜ್ಯ ಕಾಂಗ್ರೆಸ್ ಚುನಾವಣಾ ಮೈತ್ರಿ ಮಾಡಿಕೊಂಡಿರುವುದನ್ನು ಮಾಜಿ ಮಹಾರಾಜರೂ ಮತ್ತು ರಾಜ್ಯ ಕಾಂಗ್ರೆಸ್‌ನ ಚುನಾವಣಾ ಸಂಚಾಲಕರೂ ಆದ ಶ್ರೀ ಕೆ. ಬಿ. ದೇಬ್‌ವರ್ಮ ಪ್ರಕಟಿಸಿದ್ದಾರೆ.

ಈ ಸುದ್ದಿ ತ್ರಿಪುರಾದ ಜನತೆಗೆ ದಿಗ್ಭ್ರಮೆ ಮತ್ತು ಅಚ್ಚರಿಯನ್ನುಂಟು ಮಾಡಿದೆ. ಜುಬಾ ಸಮಿತಿಯು ಅದರ ಸ್ಥಾಪನೆಯಾದಾಗಿನಿಂದಲೂ ಅತ್ಯಂತ ಜಾತೀಯವೂ ಮತ್ತು ಪ್ರತ್ಯೇಕತಾವಾದಿಯಾಗಿರುವುದನ್ನು ಜನತೆ ತಮ್ಮ ಅನುಭವದಿಂದ ತಿಳಿದಿದ್ದಾರೆ. ಈ ಚುನಾವಣಾ ಮೈತ್ರಿ ಕೇವಲ ತ್ರಿಪುರಾದಲ್ಲಿಲ್ಲದೆ ಇಡೀ ಈಶಾನ್ಯ ಭಾಗದಲ್ಲಿ ಪ್ರತ್ಯೇಕತಾ ಶಕ್ತಿಗಳಿಗೆ ನೇರವಾಗಿ ಪ್ರೋತ್ಸಾಹ ನೀಡಿದಂತಾಗುತ್ತದೆ ಎನ್ನುವುದರಲ್ಲಿ ಯಾರಿಗೂ ಸಂಶಯವಿಲ್ಲ.

ತ್ರಿಪುರಾ ಗಿರಿಜನರಿಗೆ 'ಸ್ವತಂತ್ರ ತ್ರಿಪುರ' ಎಂಬುದು ಜುಬಾ ಸಮಿತಿಯ ಘೋಷಿತ ಧ್ಯೇಯವಾಗಿದೆ. ಎಡರಂಗ ಸರ್ಕಾರ ಬಂದ ಕೂಡಲೇ ಸಮಿತಿಯು ತನ್ನ ಪತ್ರಿಕೆಯೊಂದರಲ್ಲಿ ಸ್ವತಂತ್ರ ತ್ರಿಪುರಾದ ಭೂಪಟವೊಂದನ್ನು ಪ್ರಕಟಿಸಿತು. 26 ಜನವರಿ 1979ರೊಳಗೆ ಆರನೇ ಷೆಡ್ಯೂಲನ್ನು ಎಡರಂಗ ಸರ್ಕಾರವು ಜಾರಿಗೆ ತರದಿದ್ದರೆ ತಾನೇ ಸ್ವತಃ ಜಾರಿಗೆ ತರುತ್ತದೆಂದು ಎಡರಂಗ ಸರ್ಕಾರಕ್ಕೆ ಎಚ್ಚರಿಕೆ ನೀಡಿತು. ಜೊತೆಗೆ ಸಶಸ್ತ್ರ ಹೋರಾಟಕ್ಕೆ ತಯಾರಿ ಪ್ರಾರಂಭಿಸುವುದಲ್ಲದೆ ಆರಿಸಿದ ತನ್ನ ಸದಸ್ಯರನ್ನು ಶಸ್ತ್ರಾಸ್ತ್ರಗಳಲ್ಲಿ ತರಬೇತಿ ಪಡೆಯಲು ಬಂಗ್ಲಾದೇಶಕ್ಕೆ ಕಳುಹಿಸಿತು.

ಆನಂದಮಾರ್ಗಿಗಳೂ ಸುಮ್ಮನೆ ಕುಳಿತಿಲ್ಲ. ಅಮರ ಬಂಗಾಲಿ ಪಕ್ಷ ದಡಿಯಲ್ಲಿ ಕಾಂಗ್ರೆಸ್‌ನ ಒಂದು ವಿಭಾಗವನ್ನು ಸೇರಿಸಿಕೊಂಡು 'ಬಂಗಾಳಸ್ಥಾನದ' ಸ್ಥಾಪನೆಯೇ ತನ್ನ ಉದ್ದೇಶವೆಂದು ಸಾರಿತು. ಈ ಎರಡು ಜಾತೀಯ ಶಕ್ತಿಗಳು 1979ರಲ್ಲಿ ತೇಲಿಯಮುರದಲ್ಲಿ ಗಿರಿಜನ ಮತ್ತು ಗಿರಿಜನೇತರರ ನಡುವೆ ಘರ್ಷಣೆಯುಂಟಾಗುವಂತ ಪರಿಸ್ಥಿತಿ ನಿರ್ಮಿಸಿದವು. ಆದರೆ ಶಾಂತಿ ಮತ್ತು ಕೋಮು ಸಾಮರಸ್ಯ ಬಯಸುವ ಗಿರಿಜನ ಮತ್ತು ಗಿರಿಜನೇತರರ ಸಹಕಾರದೊಂದಿಗೆ ಈ ಗಲಭೆಯನ್ನು ಒಂದೇ ದಿನದಲ್ಲಿ ಹತ್ತಿಕ್ಕಲು ಸಾಧ್ಯವಾಯಿತು.

ಆದರೆ 1980 ಮಾರ್ಚ್ 13 ರಿಂದ 15ರ ನಡುವೆ ಜುಬಾ ಸಮಿತಿಯ ವಾರ್ಷಿಕ ಅಧಿವೇಶನದಲ್ಲಿ ಅಕ್ಟೋಬರ್ 15, 1949ರ ನಂತರ ತ್ರಿಪುರ ಪ್ರವೇಶಿಸಿದ ಎಲ್ಲ ಗಿರಿಜನೇತರರು, ಅವರನ್ನು ವಿದೇಶಿಯರೆಂದು ಪರಿಗಣಿಸುವುದರಿಂದ, ತ್ರಿಪುರಾದಿಂದ ಹೊರ ಹೋಗಬೇಕೆಂದು ಘೋಷಿಸಿದ್ದಾರೆ. ಈ ದಿನಾಂಕವನ್ನು ಏಕೆ ಆರಿಸಿಕೊಂಡಿದ್ದಾರೆಂದರೆ ಅದೇ ದಿನಾಂಕದಂದು ತ್ರಿಪುರಾದ ರಾಜ ಮಹಾರಾಜರು ವಿಲೀನದ ಪತ್ರಕ್ಕೆ ಸಹಿ ಹಾಕಿದ್ದು.

ಅದಾದನಂತರ ಟ್ರ್ಯಾಡೊ ಸಮ್ಮೇಳನದಲ್ಲಿ ಕಾರ್ಯಕ್ರಮವೊಂದನ್ನು ರೂಪಿಸಲಾಯಿತು. ಈ ಕಾರ್ಯಕ್ರಮ ಯೋಜನೆಗೆ ಅಮರ ಬಂಗಾಲಿಗಳು ತೀವ್ರವಾಗಿ ಪ್ರತಿಕ್ರಿಯಿಸಿದರು. ಇದರ ಪರಿಣಾಮವೇ ಜೂನ್ 1980ರ ಗಲಭೆಗಳು.

ಅಲ್ಲಿಂದೀಚೆಗೆ ಜುಬಾ ಸಮಿತಿಯ ನಾಯಕತ್ವದಲ್ಲಾಗಲೀ ಅಥವಾ ವಿದೇಶಿಯರನ್ನು ಹೊರದಬ್ಬುವ ಘೋಷಣೆಯಲ್ಲಾಗಲೀ ಬದಲಾವಣೆಯಾಗಿದೆಯೆಂದು ತಿಳಿಯುವುದು ತಪ್ಪಾಗುತ್ತದೆ. 1980ರ ಗಲಭೆಯನಂತರ ಸಮೂಹಿಕ ಕೊಲೆಯ ಸಂಭಂಧದಲ್ಲಿ ಬೇಕಾಗಿದ್ದ ಜುಬಾ ಸಮಿತಿಯ ಒಂದು ವಿಭಾಗವು ದಸ್ತಗಿರಿಯನ್ನು ತಪ್ಪಿಸಿಕೊಳ್ಳಬೇಕಾಯಿತು. ಇವರನ್ನು "ಜುಬಾ ಸಮಿತಿ ತೀವ್ರಗಾಮಿಗಳೆಂದು" ಕರೆದರೂ ಜುಬಾ ಸಮಿತಿಗಿಂತ ಯಾವುದೇ ವಿಧದಲ್ಲೂ ಬೇರೆ ಅಲ್ಲ.

ವಿದೇಶಿಯರನ್ನು ಹೊರಹಾಕುವ ಟ್ರ್ಯಾಡೊ ಸಮ್ಮೇಳನದ ಈ ಘೋಷಣೆಯಿಂದ ಸ್ವಲ್ಪವೂ ಹಿಂಜರಿದಿಲ್ಲ ಜುಬಾ ಸಮಿತಿ ಮತ್ತು ಅದರ ವಿದ್ಯಾರ್ಥಿ, ಮಹಿಳಾ ಸಂಘಟನೆಗಳು ಅನುಮೋದಿಸಿರುವ ಕೆಲವು ಠರಾವುಗಳನ್ನು ನಾನು ಉದಾಹರಿಸಬಯಸುತ್ತೇನೆ.

○ 20, 21 ಫೆಬ್ರವರಿ 1982 ರಂದು ರಾಯಬಾರಿಯಲ್ಲಿ ನಡೆದ ತ್ರಿಪುರ ಸುಂದರಿ ನಾರಿ ವಾಹಿನಿಯ (ಜುಬಾ ಸಮಿತಿಯ ಮಹಿಳಾ ಸಂಘಟನೆ) ಅಧಿವೇಶನದಲ್ಲಿ "ವಿದೇಶಿಯರ ವಿರುದ್ಧ ಪರಿಣಾಮಕಾರಿ ಕ್ರಮ" ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲಾಗಿದೆ.

○ 12, 13 ಫೆಬ್ರವರಿ 82 ರಂದು ಬೊಗಾಫಾನಲ್ಲಿ ನಡೆದ ಟ್ರೈಬಲ್ ಸ್ಟೂಡೆಂಟ್ಸ್ ಫೆಡರೇಷನ್ (ಜುಬಾ ಸಮಿತಿಯ ವಿದ್ಯಾರ್ಥಿ ವಿಭಾಗ) ಅಧಿವೇಶನದಲ್ಲಿ 'ತ್ರಿಪುರಾದಲ್ಲಿನ ವಿದೇಶಿಯರ ಸಮಸ್ಯೆಗೆ ತಕ್ಷಣ ಪರಿಹಾರಕ್ಕೆ ಒತ್ತಾಯಿಸಿದೆ.

—12, 14 ಮಾರ್ಚ್ 82 ರಲ್ಲಿ ತೆಲಿಮುರಾದ ಖುಮುರ್ ಬಾರಿಯಲ್ಲಿ ನಡೆದ ಜುಬಾ ಸಮಿತಿಯ ವಾರ್ಷಿಕ ಅಧಿವೇಶನದಲ್ಲಿ, "ಅಸ್ಸಾಮಿನ ವಿದೇಶಿಯರ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಬೇಕು ಮತ್ತು ಅದೇ ಸೂತ್ರವನ್ನು ತ್ರಿಪುರಾ ಸೇರಿದಂತೆ ಈಶಾನ್ಯ ಭಾಗದ ಎಲ್ಲ ರಾಜ್ಯಗಳಿಗೂ ಅನ್ವಯಿಸಬಹುದು" ಎಂದು ಒತ್ತಾಯಿಸಿದೆ.

ಈ ಅಧಿವೇಶನದಲ್ಲಿ ಈಗ ತಲೆಮರೆಸಿಕೊಂಡಿರುವ ಶ್ರೀ ಬಿ. ಕೆ. ಹ್ರಂಗ್‌ಖಲ್ ಭಾಗವಹಿಸಿದ್ದರೆಂಬುದನ್ನು ಗಮನಿಸಬಹುದು.

ಶ್ರೀ ಹ್ರಂಗ್‌ಖಲ್ ಮತ್ತಿನ್ನಿತರ ಜುಬಾ ಸಮಿತಿಯ ನಾಯಕರುಗಳು "ಸ್ವತಂತ್ರ ತ್ರಿಪುರಾ ಸರ್ಕಾರದ" ಮುಖ್ಯಸ್ಥರೆಂದು ಹೇಳಿಕೊಳ್ಳುವುದು ನಿಮ್ಮ ಗಮನದಲ್ಲಿರಲಿ. ಕಾಗದದ ಮೇಲೆ ಮಾತ್ರವಿರುವ ಈ ಸರ್ಕಾರಗಳೆಂದರೆ - ATPLO [ಜುಬಾ ಸಮಿತಿಯ ನಾಯಕ ಬಿನಂದ ಜಮಾತಿಯ ನಾಯಕತ್ವದಲ್ಲಿರುವುದು] T·N·V— ವಿದ್ಯಾರ್ಥಿ ನಾಯಕ ಚೋನಿ ಕೋಲಾಯಿ ಸ್ಥಾಪಿಸಿರುವುದು. ಮತ್ತು ತ್ರಿಪುರಾದ ಜನತಾ ಸರ್ಕಾರ [ಹ್ರಂಗ್‌ಬಲ್ ನಾಯಕತ್ವದಲ್ಲಿರುವುದು]. ಮೇಲೆ ಹೇಳಿದ ಯಾವುದೆ ಅಧಿವೇಶನದಲ್ಲೂ 'ಸ್ವತಂತ್ರ ತ್ರಿಪುರಾ' ಅಥವಾ ಅವುಗಳ ಭಯೋತ್ಪಾದಕ ನಾಯಕರುಗಳ ವಿರುದ್ಧ ಸೊಲ್ಲೆತ್ತದಿರುವುದು ಅಚ್ಚರಿಯ ವಿಷಯವಲ್ಲ. ಜುಬಾ ಸಮಿತಿಯು ಚನಿ-ಕೋಕ್ ಎಂಬ ಸಾಪ್ತಾಹಿಕವನ್ನು ತನ್ನ ಪ್ರಧಾನ ಕಾರ್ಯದರ್ಶಿ ಶ್ರೀ ಶ್ಯಾಮಚರನ ತ್ರಿಪುರಾ ಸಂಪಾದಕತ್ವದಲ್ಲಿ ತರಲಾಗುತ್ತಿದೆ. ಇದರಲ್ಲಿ 'ಸ್ವತಂತ್ರ ತ್ರಿಪುರಾ.' ಅದರ ನಾಯಕರುಗಳ ವಿರುದ್ಧ ಒಂದು ಪದವೂ ಇಲ್ಲ. ಕಳೆದ ಮೂರು ತಿಂಗಳಿಂದ ಪೋಲೀಸರಿಗೆ ಬೇಕಾಗಿದ್ದ ವ್ಯಕ್ತಿಯಾಗಿದ್ದರೂ ರಾಜ್ಯ ಕಾಂಗ್ರೆಸ್ ಮನವೊಲಿಸಲು ಜುಬಾ ಸಮಿತಿಯು ಶ್ರೀ ಹ್ರಂಗ್‌ಬಲ್‌ನನ್ನು ಪಕ್ಷದಿಂದ ಹೊರ ಹಾಕಲಾಗಿದೆ.

ಶ್ರೀ ಹ್ರಂಗ್‌ಬಲ್ ಅಲ್ಲದೆ ನಾಗೇಂದ್ರ ಜಮಾತಿಯ, ಶ್ಯಾಮಚರನ ತ್ರಿಪುರಾ ಮುಂತಾದವರು ಒಳಸಂಚಿನ ಪ್ರಕರಣಗಳಲ್ಲಿ ಆಪಾದಿತರಾಗಿದ್ದಾರೆ. ಅಗರ್ತಲಾದ ಜುಡಿಷಿಯಲ್ ನ್ಯಾಯಾಧೀಶರ ಮುಂದೆ ಶ್ರೀ ಹುಂಗ್‌ಖಲ್ ಮಾಡಿಕೊಂಡ ತಪ್ಪೊಪ್ಪಿಗೆಯನ್ನಾಧರಿಸಿ ಈ ಪ್ರಕರಣಗಳನ್ನು ಹೂಡಲಾಗಿತ್ತು. ಆದರೆ ದುರದೃಷ್ಟವಶಾತ್ ನ್ಯಾಯಾಲಯ ಆಪಾದನೆಗಳಿಂದ ಮುಕ್ತಗೊಳಿಸುವ ಮೊದಲೆ ದೆಹಲಿಗೆ ಇವರುಗಳನ್ನು ಕರೆಸಿಕೊಂಡು ಇಡಿ ದೇಶದ ಹಿತಾಸಕ್ತಿಗೆ ಮಾರಕವಾಗುವಂತೆ ರಾಜಕೀಯ ಬೆಂಬಲ ನೀಡಲಾಯಿತು.

ಇದೆಲ್ಲವನ್ನು ಎಡರಂಗದ ಸಂಕುಚಿತ ಹಿತದೃಷ್ಟಿಯಿಂದ ಬರೆಯುತ್ತಿದ್ದೇನೆಂದು ಯೋಚಿಸುವುದು ತಪ್ಪಾಗುತ್ತದೆ. ನಾನು ಇವರ ಬಗ್ಗೆ ತೀವ್ರವಾಗಿ ಯೋಚಿಸುತ್ತೇನೆ. ಕಾರಣ ನಾನು ಅವರುಗಳ ವಿನಾಶಕಾರಿ ಪಾತ್ರವನ್ನು ಜೂನ್ 80ರ ಗಲಭೆಗಳಿಗೆ ಮುಂಚೆ ಅದರ ನಂತರ ಕಂಡಿದ್ದೇನೆ. ಕಾಂಗ್ರೆಸ್-ಜುಬಾ ಸಮಿತಿಯ ಚುನಾವಣಾ ಮೈತ್ರಿ ಮತ್ತೊಮ್ಮೆ ತ್ರಿಪುರಾದ ಗಿರಿಜನ-ಗಿರಿಜನೇತರ ನಡುವೆ ಕಿಚ್ಚನ್ನು ಎಬ್ಬಿಸಬಹುದು. ಸಾಮ್ರಾಜ್ಯಶಾಹಿಗಳು ಈ ಭಾಗದಲ್ಲಿ ಸಕ್ರಿಯವಾಗಿದ್ದಾರೆ. ಆದರೂ 1980ರ ಗಲಭೆಗಳ ದುರಂತವನ್ನು ಶಮನಗೊಳಿಸಲು ನಮಗೆ ಸಾಧ್ಯವಾಯಿತಲ್ಲದೆ ಕೋಮುವಾದಿ ಪ್ರತ್ಯೇಕತಾ ಶಕ್ತಿಗಳನ್ನು ಜನರಿಂದ ದೂರವಿಡಲು ಸಾಧ್ಯವಾಯಿತು. ಈ ಮೈತ್ರಿಯು ನಮ್ಮ ಹೊಣೆಯ ಭಾರವನ್ನು ಹೆಚ್ಚಿಸುತ್ತದೆ. ಈ ಎಲ್ಲ ತೊಂದರೆಗಳ ಎದುರಿನಲ್ಲೂ ತ್ರಿಪುರಾವೂ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಂಡು ಈ ಭಾಗದಲ್ಲಿ ರಾಷ್ಟ್ರೀಯ ಏಕತೆಗೆ ಮಾದರಿಯಾಗಿ ನಿಲ್ಲುತ್ತದೆಂದು ನನಗೆ ವಿಶ್ವಾಸವಿದೆ.

ಧನ್ಯವಾದಗಳೊಂದಿಗೆ

ಸಹಿ/
ನೃಪೇನ್ ಚಕ್ರವರ್ತಿ

○

ಪಕ್ಷದ ಕಾರ್ಯಕ್ಕೆ ಸೇನೆ: ಜನತಂತ್ರಕ್ಕೇ ಭಾರಿ ಕೇಡು

—ಇ. ಎಂ. ಎಸ್.

ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸಲು ಪ್ರಧಾನಿ ಇಂದಿರಾ ಅವರು ಸೈನಿಕ ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿರುವುದು ಜನತಂತ್ರಕ್ಕೆ ಭಾರೀ ಕೇಡನ್ನುಂಟುಮಾಡುತ್ತದೆ ಎಂದು ಇ. ಎಂ. ಎಸ್, ತಿಳಿಸಿದ್ದಾರೆ. ಅವರು ಕಲ್ಕತ್ತದಲ್ಲಿ ಡಿಸೆಂಬರ್ 24 ರಂದು ಪತ್ರಿಕಾಗೋಷ್ಠಿಯೊಂದನ್ನುದ್ದೇಶಿಸಿ ಮಾತನಾಡುತ್ತಿದ್ದರು.

ತ್ರಿಪುರಾದಲ್ಲಿ ಕಾಂಗ್ರೆಸ್ (ಐ), ತ್ರಿಪುರಾ ಉಪಜಾತಿ ಜುಬಾ (ಬ) ಸಮಿತಿಯ ಜೊತೆ ಮಾಡಿಕೊಂಡ ಮೈತ್ರಿಯನ್ನು ಪೂರ್ವ ಸೇನಾಧಿಪತ್ಯದ ದಂಡನಾಯಕ ಲೆ|| ಜ|| ಎ. ಎಸ್. ವೈದ್ಯ ಸಮರ್ಥಿಸಿರುವುದಾಗಿ ದೆಹಲಿಯ ಪತ್ರಿಕೆಯೊಂದು ಮಾಡಿರುವ ವರದಿಯನ್ನು ಕಾಂ| ಇ. ಎಂ. ಎಸ್. ಉದ್ಧರಿಸಿದರು. ಪ್ರಥಮ ದರ್ಜೆಯ ಸೈನಿಕ ಅಧಿಕಾರಿಗಳನ್ನು ರಾಜಕೀಯಕ್ಕೆ ನೇರವಾಗಿ ಬಳಸಿಕೊಳ್ಳುವ ಇಂದಿರಾ ಯತ್ನ ಸಮಗ್ರ ರಾಷ್ಟ್ರಕ್ಕೆ ಗಂಡಾಂತರಕಾರಿ ಎಂದು ಕಾಂ| ಇ. ಎಂ. ಎಸ್. ಎಚ್ಚರಿಸಿದರು.

ಈ ಹೇಳಿಕೆ ನೀಡಿರುವುದಕ್ಕಾಗಿ ಜ|| ವೈದ್ಯ ಅವರನ್ನು ಪ್ರಧಾನಿ ತರಾಟೆಗೆ ತೆಗೆದುಕೊಳ್ಳದಿರುವುದನ್ನು ಗಮನಿಸಿದರೆ, ರಾಜಕೀಯದಲ್ಲಿ ಸಶಸ್ತ್ರ ಪಡೆಗಳ ಹಸ್ತಕ್ಷೇಪಕ್ಕೆ ಪ್ರಧಾನಿಯ ಉತ್ತೇಜನವಿರುವುದೆಂಬುದನ್ನು ಸ್ಪಷ್ಟಪಡಿಸುತ್ತದೆ— ಎಂದು ಕಾಂ| ಇ.ಎಂ.ಎಸ್. ನುಡಿದರು.

ಚುನಾವಣೆಗಳು ಸಮೀಪಿಸುತ್ತಿರುವಾಗ ತ್ರಿಪುರಾ ರಾಜ್ಯದಲ್ಲಿ ಹಿಂಸೆಯ ವಾತಾವರಣ ಮೂಡಿಸಲು ಹಾಗೂ ತಮ್ಮ ಪಕ್ಷದ ರಾಜಕಾರಣಕ್ಕೆ ಸೇನೆಯನ್ನು ಬಳಸುತ್ತಿರುವುದು, ಕಾಂಗ್ರೆಸ್ ಅಧಿಕಾರ ದುರುಪಯೋಗದಲ್ಲಿ ಎಲ್ಲ ಸಂಯಮಗಳನ್ನೂ ಗಾಳಿಗೆ ತೂರಿದಂತಾಗಿದೆ ಎಂದು ಕಾಂ| ಇ. ಎಂ. ಎಸ್. ನುಡಿದರು.

ಕೇರಳ :

ನಿರುದ್ಯೋಗ ಭತ್ಯೆಗೆ ಒತ್ತಾಯಿಸಿ ಡಿ. ವೈ. ಎಫ್. ಐ. ನೇತೃತ್ವದಲ್ಲಿ ರಾಜ್ಯಮಟ್ಟದ ಚಳುವಳಿ

ಎಡರಂಗ ಸರ್ಕಾರ ಜಾರಿಗೆ ತಂದಿದ್ದ ನಿರುದ್ಯೋಗ ಭತ್ಯವನ್ನು ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂದ ಕರುಣಾಕರನ್ ಸರ್ಕಾರವು ರದ್ದುಪಡಿಸಿತು. ಇದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಎರಡು ಲಕ್ಷ ಮಂದಿ ಯುವಕ - ಯುವತಿಯರು ಹೋರಾಟಕ್ಕೆ ಧುಮುಕಿದ್ದಾರೆ.

ಗ್ರಾಮಾಂತರ ಪ್ರದೇಶಗಳಿಂದ ಜಿಲ್ಲಾ ಕೇಂದ್ರಕ್ಕೆ ಬಂದು ಬಿಡಾರ ಹೂಡಿದ ಯುವಜನರಿಂದ 20-12-82 ರಿಂದ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕಚೇರಿಗಳ ಕೆಲಸವನ್ನು ಸ್ತಬ್ಧಗೊಳಿಸುವ ಕಾರ್ಯಕ್ರಮ ಪ್ರಾರಂಭವಾಗಿದೆ.

ಸಿ.ಪಿ.ಐ.[ಎಂ] ನೇತೃತ್ವದ ಸರ್ಕಾರ ಜ್ಯಾರಿಗೆ ತಂದಿದ್ದ ನಿರುದ್ಯೋಗ ಭತ್ಯೆಯನ್ನು ಮುಂದುವರಿಸಬೇಕೆಂಬುದೇ ಡಿ.ವೈ.ಎಫ್.ಐ.ನ ಪ್ರಮುಖ ಬೇಡಿಕೆ.

ಕಾಂ| ಪ್ರಮೋದ್ ಸಾವು

ಕಳೆದ ಎರಡು ದಶಕಗಳ ಕಾಲ ಪಕ್ಷದ ವಿಖ್ಯಾತ ವೀರಗಾಥೆಯಲ್ಲಿ ಎದುರಾದ ಸುಖ-ದುಃಖಗಳನ್ನು ನನ್ನೊಡನೆ ಹಂಚಿಕೊಂಡ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತಾ ಇಲ್ಲವಾಗಿದ್ದಾರೆ. ತಮ್ಮ ಶ್ವಾಸಕೋಶದ ತೊಂದರೆಗಾಗಿ ಚಿಕಿತ್ಸೆ ಪಡೆಯಲು ಅಕ್ಟೋಬರ್ 27, 1982 ರಂದು ಚೀನಾ ಜನತಾ ಗಣರಾಜ್ಯದ ರಾಜಧಾನಿ ಬೀಜಿಂಗ್‌ಗೆ ತೆರಳಿದ್ದ ಕಾಂ| ಗುಪ್ತಾರವರು ನವೆಂಬರ್ 27 ರಂದು ನಿಧನರಾಗಿದ್ದಾರೆ.

ಕಾಂ| ಗುಪ್ತಾರವರ ಅಗಲಿಕೆ ನಮ್ಮ ಪಕ್ಷದ ಪೊಲಿಟ್‌ಬ್ಯೂರೋ, ಕೇಂದ್ರ ಸಮಿತಿ ಮತ್ತು ಒಟ್ಟು ಪಕ್ಷಕ್ಕೆ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಪಕ್ಷದ ಹೆಮ್ಮೆಯ ಪ. ಬಂಗಾಳ ಘಟಕಕ್ಕೆ ದೊಡ್ಡ ನಷ್ಟ ಉಂಟುಮಾಡಿದೆ. ಇವರ ಸಾವು ಶೂನ್ಯವನ್ನು ಸೃಷ್ಟಿಸಿದೆ. ಇದನ್ನು ತುಂಬುವುದು ತೀರಾ ಕಷ್ಟಕರ.

26ರ ಬೆಳಿಗ್ಗೆ ಒಂಭತ್ತು ಗಂಟೆಗೆ ಕಾಂ| ಗುಪ್ತಾರವರ ಸ್ಥಿತಿ ಕೆಟ್ಟಿದೆಯೆಂಬ ಸಂದೇಶ ನಮಗೆ ತಲುಪಿದಾಗ ಪೊಲಿಟ್‌ಬ್ಯೂರೊ ಸಭೆ ಸೇರಿ ಕೂಡಲೇ ನಾನು ಬೀಜಿಂಗ್‌ಗೆ ಹೋಗಬೇಕೆಂದು ತೀರ್ಮಾನಿಸಿತು. ಅದೇ ದಿನ ರಾತ್ರಿ ಎಂಟು ಗಂಟೆಗೆ ನಾನು ದೆಹಲಿಯಿಂದ ಹೊರಟು 28ರ ಮುಂಜಾನೆ ಬೀಜಿಂಗ್ ತಲುಪಿದೆ; ಬೆಳಿಗ್ಗೆ 9 ರಿಂದ 11 ಗಂಟೆಯವರೆಗೂ ಕಾಂ| ಪ್ರಮೋದರನ್ನು ಆದಷ್ಟು ಶೀಘ್ರದಲ್ಲೇ ವಿಮಾನದಲ್ಲಿ ಭಾರತಕ್ಕೆ ಕರೆದೊಯ್ಯುವ ಕುರಿತು ಚರ್ಚೆಯಲ್ಲಿ ತೊಡಗಿದ್ದೆ. ಕೊನೆಗೆ ಮಧ್ಯಾಹ್ನ 2-30ಕ್ಕೆ ಚೀನೀ ಡಾಕ್ಟರುಗಳನ್ನು ಭೇಟಿಮಾಡಿ ಕಾಂ| ಪ್ರಮೋದರ ಪ್ರಯಾಣದ ಯುಕ್ತತೆಯನ್ನು ಕುರಿತು ಅವರ ವೈದ್ಯಕೀಯ ಸಲಹೆ ಪಡೆಯಬೇಕೆಂದು ತೀರ್ಮಾನಿಸಿದೆವು.

ಆದರೆ ಅದೃಷ್ಟ ಬೇರೆ ರೀತಿಯಲ್ಲೇ ತೀರ್ಮಾನಿಸಿತು. ಕೂಡಲೇ ಆಸ್ಪತ್ರೆಗೆ ಬರಬೇಕೆಂದು ತುರ್ತು ಕರೆ ಬಂದಾಗ ನಾನು 1-50ಕ್ಕೆ ಆಸ್ಪತ್ರೆ ತಲುಪಿದೆ. ಆದರೆ ಕಾಂ| ಪ್ರಮೋದರನ್ನು ಭಾರತಕ್ಕೆ ಕರೆದೊಯ್ಯುವ ಬಗ್ಗೆ ಚರ್ಚಿಸುವುದಕ್ಕಿಲ್ಲ. ಆದರೆ ಅವರು ಸತ್ತಿರುವುದನ್ನು ಕಾಣುವುದಕ್ಕಾಗಿ, ಕೆಲವೇ ನಿಮಿಷಗಳ ಹಿಂದೆ ಅವರು ಸಾವನ್ನಪ್ಪಿದ್ದರು.

ನಾನು ಡಾಕ್ಟರು ಹಾಗೂ ನರ್ಸ್‌ಗಳೊಂದಿಗೆ ಕೊಠಡಿಯನ್ನು ಪ್ರವೇಶಿಸುತ್ತಿರುವುದನ್ನು ಕಂಡೊಡನೆ, ಕಾಂ| ಪ್ರಮೋದರೊಂದಿಗೆ ಬೀಜಿಂಗ್‌ಗೆ ಬಂದಿದ್ದ ಕಾಂ| ಬುದ್ಧದೇವ ಭಟ್ಟಾಚಾರ್ಯ ಅವರು ನೆಲಕ್ಕೆ ಕುಸಿದರು. ಏನು ಸಂಭವಿಸಿದೆ ಎಂಬುದರ ಕುರಿತು ನನಗೆ ಸಂಶಯ ಉಳಿಯಲಿಲ್ಲ. ಕಾಂ| ಪ್ರಮೋದರ ಸಾವನ್ನು ಶಬ್ದಗಳ ಮೂಲಕ ಯಾರೂ ನನಗೆ ತಿಳಿಸಬೇಕಾಗಿರಲಿಲ್ಲ. ನಾನು ಅವರ ಹಾಸಿಗೆಯ ಬಳಿಗೆ ಹೋಗಿ ಅವರ ಹಣೆಯ ಮೇಲೆ ಕೈಯಿಟ್ಟೆ. ಅದು ತಣ್ಣಗಾಗಿತ್ತು. ಅವರ ಮೂಗಿನ ಬಳಿ ನನ್ನ ಬೆರಳನ್ನಿಟ್ಟೆ ಅಲ್ಲಿ ಉಸಿರಿರಲಿಲ್ಲ. ಒಂದೆರಡು ನಿಮಿಷಗಳ ಕಾಲ ನಾಥು. ಮುಂಕು ಕವಿದು ನಿಂತೆ. ಒತ್ತಿ ಬರುತ್ತಿರುವ ದುಃಖವನ್ನು ತಡೆಯಲು ನಾನು ನನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸಿದೆ.

ಕಾಂ| ಪ್ರಮೋದರನ್ನು ಉಳಿಸಲು ಆಸ್ಪತ್ರೆಯ ಎಲ್ಲಾ ಡಾಕ್ಟರುಗಳೂ ಕೂಡ ಒಂದು ಗಂಟೆಗಿಂತಲೂ ಹೆಚ್ಚು ಕಾಲ ತೀವ್ರಹೋರಾಟ ನಡೆಸಿದ್ದರು. ಆದರೂ ಅದು ಪ್ರಯೋಜನವಾಗಲಿಲ್ಲ. ಇದು ಅಲ್ಲಿನ ಡಾಕ್ಟರುಗಳಿಗೆ ತುಂಬಾ ದುಃಖವನ್ನುಂಟುಮಾಡಿತ್ತು. ನಾನು ಅಳುವನ್ನು ತಡೆ ಹಿಡಿದುಕೊಂಡು ಕಾಂ| ಬುದ್ಧದೇವ್ ಭಟ್ಟಾಚಾರ್ಯ ಅವರಿಗೆ ಅಳಬೇಡವೆಂದು ಹೇಳುತ್ತಿದ್ದೆ.

29ರ ಬೆಳಿಗ್ಗೆ ನಾನು ನೇರವಾಗಿ ಆಸ್ಪತ್ರೆಗೆ ಹೋಗಿ ಕಾಂ| ಪ್ರಮೋದರೊಡನೆ ಮಾತನಾಡುವ ಬದಲು, ಅವರನ್ನು ಭಾರತಕ್ಕೆ ಕರೆದೊಯ್ಯುವ ಕುರಿತು ಚೀನೀ ಸಂಗಾತಿಗಳೊಂದಿಗೆ ಚರ್ಚೆಯಲ್ಲಿ ನಿರತನಾದುದರ ಬಗ್ಗೆ ನನ್ನನ್ನೇ ನಾನು ಶಪಿಸಿಕೊಂಡೆ. ಬೆಳಗ್ಗೆ 9 ಗಂಟೆಯ ಹೊತ್ತಿಗೆ ಕಾಂ| ಪ್ರಮೋದರು ಪ್ರಜ್ಞಾಹೀನರಾದರೆಂದು ಕಾಂ| ಬುದ್ಧದೇವ್ ತಿಳಿಸಿದರು. ಅಲ್ಲಿನ ಡಾಕ್ಟರುಗಳು ಮಾಡಬೇಕಾದ ಪ್ರಯತ್ನಗಳನ್ನು ಮಾಡಿದರೂ ಕೂಡ ಅವರನ್ನು ಉಳಿಸಿಕೊಳ್ಳಲಾಗಲಿಲ್ಲ.

ನಿರಾಶೆಯ ವಾತಾವರಣ

ಕಾಂ| ಪ್ರಮೋದರನ್ನು ಭಾರತಕ್ಕೆ ಕರೆತರಬೇಕೆಂದು ಬೀಜಿಂಗ್‌ಗೆ ಧಾವಿಸಿದ್ದ ನಾನು ಈಗ ಅವರ ಶವವನ್ನು ಭಾರತಕ್ಕೆ ಹೇಗೆ ಕೊಂಡು ಹೋಗಬೇಕೆಂಬ ಕುರಿತು ಚರ್ಚಿಸಬೇಕಾದ ದುರದೃಷ್ಟಕ್ಕೆ ಒಳಗಾಗಿದ್ದೆ. ಕಾಂ| ಪ್ರಮೋದರನ್ನು ಜೀವಂತವಾಗಿ ಭಾರತಕ್ಕೆ ಕರೆತರಲು ಕನಿಷ್ಠ ಇನ್ನೊಂದು ವಾರ ಕಾಲವಾದರೂ ಬದುಕಿದ್ದರೆ ಸಾಧ್ಯವಾಗುತ್ತಿತ್ತು. ಆದರೆ ಪ್ರಕೃತಿ ಅಷ್ಟಾದರೂ ಕರುಣೆ ತೋರಲಿಲ್ಲ. ನಿರಾಶೆಯ ವಾತಾವರಣ ಅಲ್ಲಿದ್ದವರನ್ನು ಆವರಿಸಿತು. ಅದರಲ್ಲೂ ಮುಖ್ಯವಾಗಿ ಕಾಂ| ಬುದ್ಧದೇವ್ ಮತ್ತು ನನ್ನನ್ನು. ನಾವು ಎದುರಿಸಬೇಕಾಗಿದ್ದ ಪ್ರಥಮ ಕರ್ತವ್ಯವೆಂದರೆ ದೆಹಲಿಯ ನಮ್ಮ ಪಕ್ಷದ ಕೇಂದ್ರ ಸಮಿತಿ ಕಚೇರಿ ಮತ್ತು ಕಲ್ಕತ್ತಾದಲ್ಲಿರುವ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಕಚೇರಿಗಳಿಗೆ ಹಾಗೂ ಪಕ್ಷಕ್ಕೆ ಮತ್ತು ಭಾರತದ ಜನತೆಗೆ ಕಾಂ|| ಪ್ರಮೋದರ ಸಾವಿನ ದುಃಖದ ವಾರ್ತೆಯನ್ನು ತಿಳಿಸುವುದೇ ಆಗಿತ್ತು. ಚೀನಾದ ನಮ್ಮ ಸಂಗಾತಿಗಳು ತೀವ್ರವಾದ ಶೋಕಕ್ಕೆ ಒಳಗಾಗಿದ್ದರು. ಮತ್ತು ಎಲ್ಲದರಲ್ಲೂ ದೊಡ್ಡ ರೀತಿಯ ಸಹಾಯ ನೀಡಿದರು.

ಇಂತಹ ಒಂದು ಕ್ಲಿಷ್ಟಕರ ಸ್ಥಿತಿಯಲ್ಲಿ ನಾನು ಬೀಜಿಂಗ್‌ನಲ್ಲಿರದೇ ಹೋಗಿದ್ದರೆ, ಕಾಂ| ಬುದ್ಧದೇವ್ ಅವರು ತುಂಬಾ ದುರವಸ್ಥೆಗೆ ಒಳಗಾಗುತ್ತಿದ್ದರು. ಮತ್ತು ಅವರ ಜೊತೆ ಇಲ್ಲದಿರುತ್ತಿದ್ದರೆ ಇಂತಹ ಆತಂಕದ ವಾತಾವರಣದಲ್ಲಿ ನಾನು ದೀರ್ಘವಾದ ಆರು ದಿನಗಳನ್ನು ಕಳೆಯುವುದು ತುಂಬಾ ಕಷ್ಟದ್ದಾಗಿರುತಿತ್ತು. ಚೀನಾದ ಸಂಗಾತಿಗಳ ಆತ್ಮೀಯವಾದ ಸಾಂತ್ವನ ನನ್ನನ್ನು ಉಳಿಸಿ, ತೀರ್ಮಾನಗಳನ್ನು ಕೈಗೊಳ್ಳುವುದಕ್ಕೂ, ಕಾಮ್ರೇಡ್ ಜ್ಯೋತಿಬಸು, ಸರೋಜ್ ಮುಖರ್ಜಿ, ಬಿಮನ್‌ಬಸು, ಅನಿಲ್ ಬಿಸ್ವಾಸ್ ಮತ್ತು ಸೈಲೇಸ್ ದಾಸ್ ಗುಪ್ತಾರವರೊಡನೆ ಪ್ರತಿದಿನ ಸಂಪರ್ಕಿಸುವುದಕ್ಕೂ ನೆರವಾಯಿತು.

ಕಾಂ| ಪ್ರಮೋದರ ಶವವನ್ನು ತಮ್ಮದೇ ವಿಮಾನದಲ್ಲಿ ಭಾರತಕ್ಕೆ ಕೊಂಡೊಯ್ಯಲು ಇಚ್ಛಿಸಿದ್ದರೇ ಹೊರತು, ಮೃತ ದೇಹವನ್ನು ಹಾಂಕಾಂಗ್‌ಗೆ ಕೊಂಡೊಯ್ದು ಅಲ್ಲಿಂದ ಬೇರೆ ವಿಮಾನದಲ್ಲಿ ಕೊಂಡು ಹೋಗುವುದನ್ನು ಅವರು ಇಷ್ಟಪಟ್ಟಿರಲಿಲ್ಲವೆಂಬುದನ್ನು ಚೀನೀ ಸಂಗಾತಿಗಳು ನನ್ನೊಡನೆ ಹೇಳದಿದ್ದರೂ ಕೂಡ ನನಗೆ ಅದು ಅರ್ಥವಾಯಿತು. ಪ. ಬಂಗಾಳದ ನಮ್ಮ ಸಂಗಾತಿಗಳು ಶವವನ್ನು ಆದಷ್ಟು ಶೀಘ್ರದಲ್ಲೇ ಅಂದರೆ ಡಿಸೆಂಬರ್ 1 ಅಥವಾ 2ರೊಳಗೆ ತರಬೇಕೆಂದು ಅಪೇಕ್ಷಿಸಿದ್ದರು.

ಡಿಸೆಂಬರ್ 1ರ ರಾತ್ರಿಯೇ ಭಾರತೀಯ ವಾಣಿಜ್ಯ ವಿಮಾನವೊಂದರಲ್ಲಿ ಹಾಂಕಾಂಗ್‌ನಿಂದ ಮೃತ ದೇಹವನ್ನು ತರಲು ನೆರವಾಗಬೇಕೆಂದು ಕಾಂ|| ಜ್ಯೋತಿಬಸು ಅವರು ಕೇಂದ್ರ ಸರಕಾರವನ್ನು ಕೋರಿದ್ದರು. ಹಾಂಕಾಂಗ್‌ನಿಂದ ಭಾರತೀಯ ವಿಮಾನದಲ್ಲಿ ಶವವನ್ನು ತರಲು ಬೇಕಾದ ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಚೀನಾದಲ್ಲಿರುವ ರಾಯಭಾರಿ ಕಚೇರಿಗೆ ಕೇಂದ್ರ ಸರಕಾರ ಸೂಚನೆಯನ್ನು ಕಳಿಸಿತು.

ಆದರೆ ಚೀನಾದ ವಿಮಾನದ ಮೂಲಕ ಮೃತ ದೇಹವನ್ನು ಡಿ. 1 ರಂದು ಹಾಂಕಾಂಗ್‌ಗೆ ಕೊಂಡೊಯ್ಯುವ ಯೋಜನೆಯನ್ನು ಹಲವಾರು ತಾಂತ್ರಿಕ ಸಮಸ್ಯೆಗಳ ಕಾರಣದಿಂದಾಗಿ ಕೈಬಿಡಲಾಯಿತು.

ಮೃತ ದೇಹ ಕಲ್ಕತ್ತಾ ತಲುಪಿತು

ಚೀನಾ ಜನತಾ ಗಣರಾಜ್ಯದ 32 ವರ್ಷಗಳ ಇತಿಹಾಸದಲ್ಲಿ ಮೃತ ದೇಹವನ್ನು ಯಾವುದೇ ಬೇರೆ ದೇಶಕ್ಕೆ ಸಾಗಿಸುತ್ತಿರುವುದು ಇದೇ ಪ್ರಥಮ ಎಂಬುದಾಗಿ ಅಲ್ಲಿನ ಚೀನಾದ ಸಂಗಾತಿಗಳು ನಮಗೆ ತಿಳಿಸಿದರು. ಡಾಕ್ಟರ್ ಸರ್ಟಿಫಿಕೇಟ್, ವಿಶೇಷ ವಿಮಾನ ತಮ್ಮ ಪ್ರದೇಶದ ಮೂಲಕ ಹಾದು ಹೋಗಲು ವಿವಿಧ ದೇಶಗಳ ಅನುಮತಿ, ಕಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಇಳಿಯುಲು ಅನುಕೂಲವಾಗುವಂತೆ ನಿಲ್ದಾಣವನ್ನು ಸಜ್ಜುಗೊಳಿಸುವುದು, ಇಂತಹ ಇನ್ನೂ ಅನೇಕ ತಾಂತ್ರಿಕ ಸಮಸ್ಯೆಗಳನ್ನು ಕುರಿತು ನಿರ್ಣಯಿಸಬೇಕಿತ್ತು. ಈ ಕಾರಣಗಳಿಂದಾಗಿ ಮೃತ ದೇಹವನ್ನು ಡಿಸೆಂಬರ್ 5 ಕ್ಕಿಂತಲೂ ಮೊದಲೇ ಭಾರತಕ್ಕೆ ಸಾಗಿಸುವುದು ಅಸಾಧ್ಯವೆಂದು ಕಂಡು ಬಂದಿತು.

ಮೃತ ದೇಹವನ್ನು ವಿಶೇಷ ವಿಮಾನದ ಮೂಲಕ ಕಲ್ಕತ್ತಾಗೆ ಡಿಸೆಂಬರ್ 5ರ ಬೆಳಿಗ್ಗೆ ತಲುಪುವಂತೆ ವ್ಯವಸ್ಥೆ ಮಾಡುವುದು ಅಗಲಿದ ನಾಯಕನಿಗೂ, ಪಕ್ಷಕ್ಕೂ ಮತ್ತು ಚೀನಾ ಸರಕಾರಕ್ಕೂ ಅತ್ಯಂತ ಉಚಿತವೂ ಗೌರವತರುವಂತಹುದೂ ಆಗುತ್ತದೆಂದು ನಾನು ಮತ್ತು ಕಾಂ|| ಬುದ್ಧದೇವರು ತೀರ್ಮಾನಿಸಿದೆವು. ನಾವು ತೆಗೆದುಕೊಂಡ ತೀರ್ಮಾನವನ್ನು ಕಲ್ಕತ್ತಾದಲ್ಲಿದ್ದ ಕಾಂ|| ಜ್ಯೋತಿಬಸು ಮತ್ತು ಪ.ಬಂಗಾಳ ರಾಜ್ಯ ಸಮಿತಿಯವರು ಕೂಡಲೇ ಒಪ್ಪಿಕೊಂಡರು. ನಾವಿಬ್ಬರೂ ಮತ್ತು ಕಾಂ| ಸೋಮನಾಥ ಚಟರ್ಜಿಯವರೂ ಶವಪೆಟ್ಟಿಗೆಯೊಡನೆ ವಿಮಾನವನ್ನೇರಿ 5ರ ಬೆಳಿಗ್ಗೆ 9 ಗಂಟೆಗೆ ಕಲ್ಕತ್ತಾಗೆ ಬಂದು ತಲುಪಿದೆವು.

ವಿಮಾನ ನಿಲ್ದಾಣದಲ್ಲಿ ಇಡೀ ದೃಷ್ಟಿ ಹಾಯುವವರೆಗೆ ಕಣ್ಣು ಸುರಿಸುತ್ತಾ ಸಾವಿರಾರು ಜನ ನಿಂತಿದ್ದರು. ವಿಮಾನ ನಿಲ್ದಾಣದ ಅಲಿಮುದ್ದೀನ್ ರಸ್ತೆಯಲ್ಲಿರುವ ರಾಜ್ಯ ಸಮಿತಿ ಕಚೇರಿಯವರೆಗೂ ರಸ್ತೆ ಎರಡೂ ಬದಿಗಳಲ್ಲಿ ಜನಸಮೂಹ ಸಾಲಾಗಿ ನೆರೆದಿತ್ತು.

೫ ಲಕ್ಷ ಜನರು ಹಿಂಬಾಲಿಸಿದ ಪ್ರಮೋದರ ಅಂತಿಮ ಯಾತ್ರೆ

ಅಂತಿಮ ಯಾತ್ರೆ ಪ್ರಾರಂಭಗೊಂಡಿತು. ಮೂರು ಗಂಟೆಗಳ ಕಾಲ ಮೆರವಣಿಗೆ ಸಾಗಿತು. ಲಕ್ಷಾಂತರ ಮಂದಿ ಹೆಂಗಸರು ಗಂಡಸರು ಪ್ರಮೋದರ ಕುರಿತಾಗಿ ಪ್ರೀತಿಯ ಮಾತುಗಳನ್ನಾಡುತ್ತಾ ಬಂದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಅವರು ಸಲ್ಲಿಸಿದ ಮಹಾನ್ ಸೇವೆಯನ್ನು ಹೆಮ್ಮೆಯಿಂದಲೂ, ದುಃಖದಿಂದಲೂ ಹೇಳಿಕೊಳ್ಳುತ್ತಿದ್ದರು. ಪ್ರಮೋದ್‌ರಂತಹ ಕ್ರಾಂತಿಕಾರರು ಕಳೆದ 20 ವರ್ಷಗಳಿಂದ ಮಾಡಿದ ಅಪಾರ ತ್ಯಾಗಗಳಿಂದಲೇ ಇಂದು ಪ. ಬಂಗಾಳದಲ್ಲಿ ಕಾಂ|| ಪ್ರಮೋದರನ್ನು ಕಾರ್ಯದರ್ಶಿಯನ್ನಾಗಿ ಹೊಂದಿದ್ದ ಸಿ. ಪಿ. ಗೆ ಅಪಾರ ಹೆಮ್ಮೆಯೂ ಗೌರವೂ ಲಭಿಸಿದೆ.

ನಮ್ಮ ಪ್ರೀತಿಯ ನಾಯಕರ ಮೃತದೇಹವನ್ನು ಹೊತ್ತ ಚೀನೀ ವಿಮಾನ ಕಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಇಳಿದೊಡನೆ ಕಣ್ಣಿಗೆಟುಕುವಷ್ಟು ದೂರದವರೆಗೂ ನೆರೆದಿದ್ದ ವಂಗ ಬಂಧುಗಳು ಅಳತೊಡಗಿದರು

ವಿಮಾನ ನಿಲ್ದಾಣದಿಂದ ರಾಜ್ಯ ಸಮಿತಿ ಕಚೇರಿಯಿದ್ದ ಅಲಿಮುದ್ದೀನ್ ಸ್ಟ್ರೀಟ್‌ವರೆಗೂ ಎರಡೂ ಬದಿಗಳಲ್ಲಿ ನೆರೆದಿದ್ದ ಜನತೆ ದುಃಖದಿಂದ ಕಣ್ಣೀರು ಸುರಿಸುತ್ತಿದ್ದರು.

ಕಾಂ|| ಪ್ರಮೋದ್‌ರಿಗೆ ಅಂತಿಮ ವಿದಾಯ ಹೇಳಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಬೆಂಬಲಿಗರಷ್ಟೇ ಅಲ್ಲ ಕಲ್ಕತ್ತಾ ನಗರದ ಲಕ್ಷೋಪಲಕ್ಷ ಜನ ಧಾವಿಸಿ ಬಂದರು. ಆ ಜನಕೋಟಿಯನ್ನು ನೋಡಿ ನಮಗೆ ರೋಮಾಂಚನವಾಯಿತು. ಪ್ರಮೋದರ ಭೌತ ಶರೀರವನ್ನು ಹೊತ್ತ ಅಲಂಕೃತ ವಾಹನ ಚಲಿಸುತಿತ್ತು ಅದರ ಮುಂದೆ ನಾವು ಹೋಗುತ್ತಿದ್ದೆವು ಆಗ ಜನಸಾಗರವನ್ನು ನೋಡಿದ ಪೊಲಿಟ್ ಬ್ಯೂರೋ ಸದಸ್ಯರೂ, ಕೇಂದ್ರ ಸಮಿತಿ ಸದಸ್ಯರೂ, ರಾಜ್ಯ ಸಮಿತಿ ಸದಸ್ಯರೂ ಕಾಂ| ಪ್ರಮೋದ್ ದಾಸ್ ಗುಪ್ತಾರ ನಾಯಕತ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ನಮ್ಮ ಪಕ್ಷ ಎಷ್ಟೊಂದು ಜನಪ್ರಿಯತೆ ಗಳಿಸಿದೆಯೆಂಬುದನ್ನು ಅರಿತುಕೊಂಡೆವು.

ವಿವರಿಸಲಾಗದ ವೇದನೆಯೊಂದಿಗೆ ನವೆಂಬರ್ 29 ರಿಂದ ಡಿಸೆಂಬರ್ 5ರ ವರೆಗೆ ದುಃಖದಲ್ಲಿ ಮುಳುಗಿದ್ದ ನಾನು ಸ್ಮಶಾನದಲ್ಲಿ ವಿದ್ಯುತ್ ಚಿತೆಯ ಬೆಂಕಿಗೆ ನಮ್ಮ ಪ್ರೀತಿಯ ಸಂಗಾತಿ ಪ್ರಮೋದರ ದೇಹವನ್ನು ಇಟ್ಟೊಡನೆ ನಾನು ಪ್ರಜ್ಞಾಶೂನ್ಯನಾಗಿ ನೆಲಕ್ಕೆ ಕುಸಿದೆ

ಪ್ರಮೋದರ ಕಾಣಿಕೆ

ಕಾಂ| ಪ್ರಮೋದರೊಂದಿಗೆ ನನ್ನ ಸ್ನೇಹ 1957-58ರಲ್ಲಿ ಅಂದರೆ 25 ವರ್ಷಗಳ ಹಿಂದೆಯೇ ಉಂಟಾಯಿತು. ಆದರೆ ಅದು ಬೆಳೆದು ನಿಕಟಕೊಂಡದ್ದು ಏಪ್ರಿಲ್ 1961ರಲ್ಲಿ ವಿಜಯವಾಡಾದಲ್ಲಿ ನಡೆದ ಪಕ್ಷದ ಆರನೇ ಸಮ್ಮೇಳನದ ಸಂಧರ್ಭದಲ್ಲಿ. ಅಂದು ಸಿ. ಪಿ. ಐ. ನ ರಾಷ್ಟ್ರೀಯ ಮಂಡಳಿಯಲ್ಲಿದ್ದ ಬಹುಸಂಖ್ಯಾತರನ್ನು ಎದುರಿಸಿ ಅವರ ವರ್ಗ ಸಹಕಾರ ಮತ್ತು ಬಲಪಂಥೀಯ ಪರಿಷ್ಕರಣವಾದದ ದ್ರೋಹ ನೀತಿಯ ವಿರುದ್ಧ ಹೋರಾಟ ನಡೆಸಿ ಖ್ಯಾತಿ ಪಡೆದ ಮಂಡಳಿಯ 32 ಮಂದಿ ಸದಸ್ಯರಲ್ಲಿ ಕಾಂ|| ಪ್ರಮೋದ್ ದಾಸ್ ಗುಪ್ತ ಮುಂಚೂಣಿಯಲ್ಲಿದ್ದರು. 80ಕ್ಕೂ ಮೇಲ್ಪಟ್ಟ ಬಹುಸಂಖ್ಯಾತರನ್ನೆದುರಿಸಿ ನಿಲ್ಲಬೇಕಾದ ಸಂಧರ್ಭದಲ್ಲಿ ಅಲ್ಪಸಂಖ್ಯಾತರಾದ ಈ 32 ಮುಂದಿಗೆ

ತುಂಬಲಾಗದ ನಷ್ಟ

—ಎಂ. ಬಸವಪುನ್ನಯ್ಯ

ಮಾರ್ಕ್ಸ್‌ವಾದ – ಲೆನಿನ್‌ವಾದದಲ್ಲಿ ಕಮ್ಯುನಿಸಂನಲ್ಲಿ ಧೃಢವಾದ ನಂಬಿಕೆ ಮತ್ತು ಅಪಾರವಾದ ಧೈರ್ಯ ಮತ್ತು ನಿಷ್ಠೆಯು ಬಲಿಷ್ಠವಾಗಿತ್ತು.

ಇಷ್ಟು ಮಾತ್ರವೇ ಅಲ್ಲದೆ, ಬಲಪಂಥೀಯ ಪರಿಷ್ಕರಣವಾದವನ್ನು, ವರ್ಗ ಸಹಕಾರ ಧೋರಣೆಯನ್ನು ಮುರಿದು ನಾವು ಹೊರಗೆ ಬರಲು ತೀರ್ಮಾನಿಸಿದ್ದು ಅಂತರರಾಷ್ಟ್ರೀಯ ರಂಗದಲ್ಲಿ ಕೊಡಕುಗಳನ್ನುಂಟು ಮಾಡಿತು. ನಾವು ತೆಗೆದುಕೊಂಡ ಆ ತೀರ್ಮಾನ ಜಗತ್ತಿನ ಬಹುಪಾಲು ಕಮ್ಯುನಿಸ್ಟ್ ಪಕ್ಷಗಳು, ಸೋವಿಯತ್ ಕಮ್ಯುನಿಸ್ಟ್ ಪಕ್ಷವನ್ನು ಒಳಗೊಂಡಂತೆ ಪ್ರತಿಪಾದಿಸುತ್ತಿದ್ದ ರಾಜಕೀಯ-ಸೈದ್ಧಾಂತಿಕ ನೀತಿಗಳನ್ನು ಎದುರಿಸಿ ನಿಂತು, ಭಾರತೀಯ ಪರಿಸ್ಥಿತಿಗೆ ಒಂದು ಸ್ವತಂತ್ರ ಧೋರಣೆಯನ್ನು ಮಾರ್ಕ್ಸ್‌ವಾದೀ–ಲೆನಿನ್‌ವಾದೀ ಸಿದ್ಧಾಂತದ ಆಧಾರದ ಮೇಲೆ ರೂಪಿಸುವ ತೀರ್ಮಾನವಾಗಿತ್ತು.

ನಾವು ತೆಗೆದುಕೊಂಡ ರಾಜಕೀಯ–ಸೈದ್ಧಾಂತಿಕ ತೀರ್ಮಾನವು 1966-67ರ ಸುಮಾರಿನಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷವು ಅನುಸರಿಸುತ್ತಿದ್ದ ಧೋರಣೆಯೊಡನೆ ಕೂಡ ತೀವ್ರವಾದ ಘರ್ಷಣೆಯನ್ನುಂಟುಮಾಡಿತು.

ಈ ರೀತಿಯಲ್ಲಿ ಜಗತ್ತಿನ ಬಹುಪಾಲು ಕಮ್ಯುನಿಸ್ಟ್ ಪಕ್ಷಗಳ ವಿರೋಧಕ್ಕೆ ನಾವು ಗುರಿಯಾಗಬೇಕಾಯಿತು. ಜೊತೆಗೆ ನಮ್ಮ ದೇಶದ ಆಡಳಿತ ವರ್ಗದ ಕ್ರೂರ ದಬ್ಬಾಳಿಕೆಯು ತೀವ್ರಗೊಂಡಿತು.

ಸಿ. ಪಿ. ಐ. (ಎಂ)ನ ರಾಜಕೀಯ–ಸೈದ್ಧಾಂತಿಕ ನೀತಿಗೆ ತಮ್ಮ ಅಮೂಲ್ಯ ಕಾಣಿಕೆ ಸಲ್ಲಿಸಿದ ಕಾಂ|| ಪ್ರಮೋದರು ಪಕ್ಷದ ಮುಂದಿನ ಬೆಳವಣಿಗೆಗಳನ್ನು, ಅದರ ಮಹತ್ವಪೂರ್ಣ ಗೆಲುವುಗಳನ್ನು, ನೋಡದೆ ಕಣ್ಮುಚ್ಚಿದ್ದು ದುಃಖದ ಸಂಗತಿ.

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ರಾಜಕೀಯ–ಸೈದ್ಧಾಂತಿಕ ಮಾರ್ಗವೇ ಸರಿಯಾದ ಮಾರ್ಗವೆಂದು ಅವರು ಸಂಪೂರ್ಣವಾಗಿ ನಂಬಿದ್ದರು. ನಾವು ಅನುಸರಿಸುತ್ತಿರುವ ದಾರಿ ವಿಶಾಲವಾದುದೂ, ಮೂಲಭೂತವಾಗಿ ಸಮರ್ಪಕವಾದುದೂ ಮತ್ತು ಮಾರ್ಕ್ಸ್‌ವಾದಿ- ಲೆನಿನ್‌ವಾದಿಯಾಗಿದೆಯೆಂಬ ಅಚಲ ವಿಶ್ವಾಸವನ್ನಿರಿಸಿಕೊಂಡಿದ್ದರು.

ಪಶ್ಚಿಮ ಬಂಗಾಳದಲ್ಲಿ ಕಳೆದ 20 ವರ್ಷಗಳಿಂದ ಅವರು ಗಳಿಸಿದ ಅನುಭವವು ಅವರ ನಂಬಿಕೆಯನ್ನು ದೃಢಗೊಳಿಸಿವೆ. ಸಿ. ಪಿ. ಐ. (ಎಂ) ಪಕ್ಷವನ್ನು ಎಡ ಪಂಥೀಯವೆಂದೋ ಅಥವ ಬಲಪಂಥೀಯ ಪರಿಷ್ಕರಣವಾದಿಗಳೆಂದೂ ದೂಷಿಸಿದವರು ಇಂದು ತಾವು ಮಾಡಿದ್ದ ತೀರ್ಮಾನ ತಪ್ಪೆಂದು ಬಹಿರಂಗವಾಗಿಯೂ, ಪ್ರಾಮಾಣಿಕವಾಗಿಯೂ ಒಪ್ಪಿಕೊಳ್ಳದಿದ್ದರೂ ಕೂಡ ತಮ್ಮ ತಪ್ಪನ್ನು ಅರಿತುಕೊಂಡಿದ್ದಾರೆ.

ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ

ಕಾಂ| ಪ್ರಮೋದರ ಸಾವು ಒಂದು ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ. ಆ ಶೂನ್ಯವನ್ನು ತುಂಬುವುದು ಸುಲಭದ ಕಾರ್ಯವೇನಲ್ಲ.

ದೇಶಾದ್ಯಂತ ಇರುವ ನಮ್ಮ ಒಡನಾಡಿಗಳಿಗೆ ಮತ್ತೊಂದು ವಿಷಯವನ್ನು ಕೂಡ ನೆನಪಿಗೆ ತರಲು ಇಚ್ಛಿಸುತ್ತೇನೆ. 1962-63ರಲ್ಲಿ ಪರಿಷ್ಕರಣವಾದದ ವಿರುದ್ಧ ಬಂಡಾಯ ಹೂಡಿ ಹೊರಬಂದ 32 ಮಂದಿಯಲ್ಲಿ ಐದು ಮಂದಿ 1967-68ರ ಒಳಗಾಗಿಯೇ ತಮ್ಮ ನಂಬಿಕೆಯನ್ನು ಕಳೆದುಕೊಂಡು ಪಕ್ಷದಿಂದ ದೂರನಾದರು. ಹತ್ತು ಮಂದಿ ಸಂಗಾತಿಗಳು ತಮ್ಮ ಕರ್ತವ್ಯ ನೆರವೇರಿಸುವ ಸಮಯದಲ್ಲೇ ನಿಧನ ಹೊಂದಿದರು.

32 ಮಂದಿ ರಾಷ್ಟ್ರೀಯ ಮಂಡಳಿ ಸದಸ್ಯರಲ್ಲಿ ಆರು ಮಂದಿ ಪಶ್ಚಿಮ ಬಂಗಾಳಕ್ಕೆ ಸೇರಿದವರು. ಈ ಆರು ಮಂದಿಯಲ್ಲಿ ಈಗ ನಮ್ಮ ನಡುವೆ ಉಳಿದಿರುವವರು ಸಂಗಾತಿಗಳಾದ ಕಾಂ|| ಜ್ಯೋತಿಬಸು ಮತ್ತು ಸರೋಜ್ ಮುಖರ್ಜಿ ಇಬ್ಬರು ಮಾತ್ರ. ಕಾಂ|| ಮುಜಾಫರ್ ಅಹಮದ್, ಅಬ್ದುಲ್ ಹಲೀಮ್, ಹರೇ ಕೃಷ್ಣ ಕೋನಾರ್, ಪ್ರಮೋದ್ ಗುಪ್ತಾರವರನ್ನು ನಾವು ಕಳೆದು ಕೊಂಡಿದ್ದೇವೆ.

ನಮ್ಮ ಪಕ್ಷದ ಏಳನೇ ಸಮ್ಮೇಳನದಲ್ಲಿ ರಚಿತಗೊಂಡ ಕೇಂದ್ರ ಸಮಿತಿ ಮತ್ತು ಪೊಲಿಟ್‌ಬ್ಯೂರೋಗಳಲ್ಲಿದ್ದ ಸಂಗಾತಿಗಳಾದ ಮುಜಾಫರ್ ಅಹಮದ್, ಅಬ್ದುಲ್ ಹಲೀಮ್, ಹರೇ ಕೃಷ್ಣ ಕೋನಾರ್, ಪ್ರಮೋದ್ ದಾಸ್ ಗುಪ್ತಾ, ಎ.ಕೆ. ಗೋಪಾಲನ್, ಎಸ್.ವಿ.ಪರುಳೇಕರ್, ಭಾಗ್‌ಸಿಂಗ್, ಸಿ ಹೆಚ್.ಕಣಾರನ್ ಮತ್ತು ಬಾಲಸುಬ್ರಹ್ಮಣ್ಯಂ ಅವರುಗಳು ಸಾವನ್ನಪ್ಪಿದ್ದಾರೆ. ನನ್ನ ಆತ್ಮೀಯ ಸಹಚರರೂ, ಧೀರ ನಾಯಕರೂ ಆಗಿದ್ದ ಇವರೆಲ್ಲರೂ ನಮ್ಮಿಂದ ಅಗಲಿದ್ದು ನನಗೊಂದು ದೊಡ್ಡ ಚಿಂತೆಯಾಗಿದೆ. ಏಕೆಂದರೆ ಉಳಿದಿರುವ ನಮ್ಮೆಲ್ಲರ ಮೇಲೂ ಇದು ಹೊರಲಾಗದ ಜವಾಬ್ದಾರಿಯನ್ನು ಹೊರಿಸಿದೆ.

ಮುಂದುವರಿಯುತ್ತಿರುವ ಕ್ರಾಂತಿಕಾರೀ ಚಳುವಳಿಯಲ್ಲಿ ತರುಣ ಮತ್ತು ಸಮರ್ಥ ನಾಯಕರು ಸೃಷ್ಟಿಯಾಗುತ್ತಿದ್ದಾರೆಂಬುದು ನಿಜವಾದರೂ ನನ್ನ ಕಣ್ಣೆದುರು ಶೂನ್ಯ ಗೋಚರಿಸುತ್ತಿದೆ. ನಮ್ಮ ಉನ್ನತ ನಾಯಕತ್ವಗಳಾದ ಕೇಂದ್ರ ಸಮಿತಿ ಹಾಗೂ ಪೊಲಿಟ್ ಬ್ಯೂರೋ ಕುರಿತಾಗಿಯೂ ಅದರ ತಕ್ಷಣದ ಭವಿಷ್ಯತ್ತಿನ ಬಗ್ಗೆಯೂ ನಾನು ಚಿಂತಿಸುವವನಾಗಿರಬಹುದು.

ರಾಜ್ಯ ಸಮಿತಿಯ ಮಟ್ಟದಲ್ಲಿ ಸಮರ್ಥವಾದ ಒಂದು ತಂಡವನ್ನು ರೂಪಿಸುವುದು ಕಷ್ಟದ ಕೆಲಸವೆಂದಾದರೆ ಅದನ್ನು ಅಖಿಲ ಭಾರತ ಮಟ್ಟದಲ್ಲಿ ಮಾಡುವುದೂ ಇನ್ನೂ ಹೆಚ್ಚು ಕಷ್ಟದ ಕಾರ್ಯ.

ನಮ್ಮ ದೇಶವನ್ನು ಬೇರೆ ಯಾವ ದೇಶಗಳೊಂದಿಗೂ ಹೋಲಿಸಲಾಗುವುದಿಲ್ಲ. ಇಲ್ಲಿ ಅಭಿವೃದ್ಧಿ ಹೊಂದಿದ ಭಾಷಾ ರಾಜ್ಯಗಳಿವೆ. ಈ ರಾಜ್ಯಗಳಲ್ಲಿ ಎರಡೂವರೆ ಕೋಟಿ ಜನ ಸಂಖ್ಯೆಯಿಂದ 13 ಕೋಟಿಯವರೆಗೆ ಜನಸಂಖ್ಯೆ ಇದೆ. ನಿಜವಾಗಿಯೂ ಇದೊಂದು ದೊಡ್ಡ ಖಂಡ. ಇಂಥದೊಂದು ದೊಡ್ಡ ಖಂಡದಲ್ಲಿ ಅಖಿಲ ಭಾರತ ಮಟ್ಟದ ರಾಜಕೀಯ ಪಕ್ಷ ಕಟ್ಟುವುದು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಖಿಲ ಭಾರತ ಕೇಂದ್ರ ನಾಯಕತ್ವದ ತಂಡವನ್ನು ಕಟ್ಟುವುದು ಒಂದು ಸಾಹಸದ ಕೆಲಸ. ಖ್ಯಾತಿವೆತ್ತ ಜನಪ್ರಿಯ ನಾಯಕರ ಸಾವು ಯಾವಾಗಲೂ ದೊಡ್ಡದೊಂದು ಶೂನ್ಯವನ್ನು ಸೃಷ್ಟಿಸುತ್ತದೆ. ಕಾಂ|| ಪ್ರಮೋದರ ಸಾವು ಇದನ್ನು ಇನ್ನಷ್ಟು ಹೆಚ್ಚಿಸಿದೆ.

ಪ್ರಕೃತಿಯ ನಿಯಮಗಳಿಗೆ ಯಾರೂ ಹೊರತಲ್ಲ. ಇದನ್ನು ಸರಿಯಾಗಿ ಅರಿತುಕೊಂಡೇ ನಾನು ಹೇಳುತ್ತಿದ್ದೇನೆ. ಹಳೆಯ ನಾಯಕರ ಸ್ಥಾನವನ್ನು ಸದಾ ಬೆಳೆಯುತ್ತಿರುವ ಹೊಸ ನಾಯಕರು ತುಂಬಬೇಕಾಗುತ್ತದೆ ಎಂದು.

ಕಾಂಗ್ರೆಸ್ಸನ್ನು ಸೋಲಿಸಿ, ಪ್ರಜಾಸತ್ತೆ ಉಳಿಸಿ

ಇಂದಿರಾ ಗೆಲ್ಲಿಸಿ ದೇಶ ಉಳಿಸಿ – ಎನ್ನುವುದು ಕಾಂಗ್ರೆಸ್ (ಐ) ಪಕ್ಷದ ಚುನಾವಣಾ ಪ್ರಚಾರದ ಒಂದು ಪ್ರಾಸಬದ್ಧ ಘೋಷಣೆ. ಅಂದರೆ ದೇಶವು ಪತನವಾಗುತ್ತಿದೆ, ಇಂದಿರಾ ಗಾಂಧಿಯವರನ್ನು ಗೆಲ್ಲಿಸುವುದರ ಮೂಲಕ ದೇಶ ಉಳಿಸಿ ಎನ್ನುವುದು ಈ ಘೋಷಣೆಯ ಅರ್ಥ. ಆದರೆ ಇದು ಜನತೆಯನ್ನು ವಂಚಿಸುವ ಘೋಷಣೆಯೇ ಆಗಿದೆ ಏಕೆಂದರೆ ಮೂವತ್ತೈದು ವರ್ಷಗಳಿಂದಲೂ (2 ವರ್ಷಬಿಟ್ಟು) ನೆಹರು ಹಾಗು ಅವರ ಪುತ್ರಿ ಇಂದಿರಾ ಗಾಂಧಿಯೇ ದೇಶದ ಆಡಳಿತವನ್ನು ಕಾಂಗ್ರೆಸ್ ನೇತೃತ್ವದಲ್ಲಿ ನಡೆಸಿದ್ದು, ದೇಶ ಪ್ರಗತಿ ಹೊಂದುವ ಬದಲು ವಿಗತಿ ಪಥದತ್ತ ಸಾಗಿದೆ

ಬಂಡವಾಳಶಾಹಿ ಭೂಮಾಲಿಕ ಪರ ಆರ್ಥಿಕ ನೀತಿಯನ್ನು ಅನುಸರಿಸಿದ್ದರಿಂದಾಗಿ ಜನತೆಯು ಸಮಸ್ಯೆಗಳ ಕೂಪಕ್ಕೆ ತಳ್ಳಲ್ಪಡುತ್ತಿದ್ದಾರೆ. ಬಡತನ, ಅನಕ್ಷರತೆ, ನಿರುದ್ಯೋಗ, ಬೆಲೆ ಏರಿಕೆ ಪ್ರಮಾಣ ವರ್ಷಂಪ್ರತಿಯೂ ಹೆಚ್ಚುತ್ತಿದೆ. ಅನ್ನದಾತ.ರೈತನ ಬೆಳೆಗೆ ಸಮರ್ಪಕ ಬೆಲೆ ಇಲ್ಲ, ಅವನ ಬೆನ್ನು ಮೂಳೆ ಮುರಿಯುತ್ತಿದೆ; ಕಾರ್ಮಿಕರ ಹೋರಾಟಗಳನ್ನು ದಮನಿಸಲು ಅಗತ್ಯ ಸೇವಾ ಸುಗ್ರೀವಾಜ್ಞೆ(ಎಸ್ಮಾ) ಪ್ರಜಾಸತ್ತಾತ್ಮಕ ಚಳವಳಿಗಳನ್ನು ದಮನಿಸಲು ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್.ಎಸ್.ಎ), ಬುದ್ಧಿಜೀವಿಗಳ, ಮಧ್ಯಮ ವರ್ಗ ನೌಕರರ ಹಕ್ಕುಗಳನ್ನು ದಮನಿಸುವ ಕರಾಳ ಕಾನೂನು ಇತ್ಯಾದಿಗಳು; ನ್ಯಾಯಾಂಗದ ಮೇಲೆ ನಿಯಂತ್ರಣ ಯತ್ನ, ಪತ್ರಿಕಾಕರ್ತರಿಗೆ ಅವಮಾನ, ಪತ್ರಿಕಾಲಯಗಳ ಮೇಲೆ ಧಾಳಿ, ಪತ್ರಿಕಾ ಸ್ವಾತಂತ್ರ್ಯ ಹರಣಕ್ಕೆ ವಿಧೇಯಕಗಳು, ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಹೋರಾಡುವ ರೈತ–ಕಾರ್ಮಿಕರು, ವಿದ್ಯಾರ್ಥಿ–ಯುವಜನರು, ದಲಿತರು-ಮಹಿಳೆಯರ ಮೇಲೆ ಗುಂಡಿನ ಸುರಿಮಳೆ, ಲಾಠಿ ಏಟು— ಹೀಗೆ ಕೊನೆ ಮೊದಲಿಲ್ಲದ ಪಟ್ಟಿಯಲ್ಲಿ ನಮೂದಿತವಾದ ಘಟನಾವಳಿಗಳು ಕಾಂಗ್ರೆಸ್ ಸರಕಾರದ ದುಷ್ಟ ಆಡಳಿತ ವೈಖರಿಗೆ ನಿದರ್ಶನಗಳು. ಆದರಲ್ಲೂ ಕರ್ನಾಟಕ ರಾಜ್ಯವಂತೂ ಪೋಲೀಸ್ ರಾಜ್ಯವಾಗಿದೆ. ಗುಂಡೂರಾಯರ ಬಂಡೆ ಸರಕಾರದ ಗುಂಡಿಗೆ ಮೂರಿಪ್ಪತ್ತೈಂತಲೂ ಹೆಚ್ಚು ಜನ ಬಲಿಯಾಗಿದ್ದಾರೆ.

ಒಟ್ಟಿನಲ್ಲಿ ಕಾಂಗ್ರೆಸ್ ದುರಾಡಳಿತವು ಪ್ರಜಾತಂತ್ರದ ಸೋಗಿನಲ್ಲಿ ಪ್ರಜಾಮರ್ದನ ತಂತ್ರ ಅನುಸರಿಸುತ್ತಿದೆ. ಸಮಾಜವಾದದ ಹೆಸರಿನಲ್ಲಿ ಜನತೆಯ ಜೀವಂತ ಸಮಾಧಿ ಮಾಡುತ್ತಿದೆ.

ಇವೆಲ್ಲಕ್ಕೂ ಕಾರಣ 2 ವರ್ಷ ಆಡಳಿತ ನಡೆಸಿದ ಕಾಂಗ್ರೆಸೇತರ ಸರಕಾರ ಕಾರಣವೆ ? ಇದೆಲ್ಲದರ ಮಧ್ಯೆ ಸಂವಿಧಾನದ ಚೌಕಟ್ಟಿನಲ್ಲೆ ಸಾಧ್ಯವಾದಷ್ಟು ಸೌಲಭ್ಯಗಳನ್ನು ಜನರಿಗೆ ಒದಗಿಸಲು ಹಾಗು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ತ್ರಿಪುರ ಮತ್ತು ಪಶ್ಚಿಮ ಬಂಗಾಳಗಳ ಎಡರಂಗ ಸರಕಾರಗಳ ಸ್ತುತ್ಯಾರ್ಹ ಕಾರ್ಯವನ್ನು ದೇಶ ಕುತೂಹಲದಿಂದ ಗಮನಿಸುತ್ತಿದೆ. ಅಲ್ಲದೆ ಜನತೆಯ ಹೋರಾಟಗಳು ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ನೇತೃತ್ವದಲ್ಲಿ ನಡೆಯುತ್ತಿರುವುದು ಶುಭ ಸೂಚನೆ.

ಮೂವತ್ತೈದು ವರ್ಷಗಳ ಆಡಳಿತದಿಂದ ದೇಶವನ್ನು ಉಳಿಸುವ ಕಾರ್ಯದಲ್ಲಿ ವಿಫಲವಾದ ಕಾಂಗ್ರೆಸ್ ಇನ್ನು ದೇಶವನ್ನು ಉಳಿಸುತ್ತದೆನ್ನುವ ಆಶೆ ಕೇವಲ ಒಂದು ಭ್ರಮೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯಾದ ಈ ಸಂದರ್ಭದಲ್ಲಿ ಪ್ರಜಾಸತ್ತೆ ಉಳಿಸುವತ್ತ ಒಂದು ಹೆಜ್ಜೆಯಾಗಿ ವಂಶಪಾರಂಪರ್ಯ ಸರ್ವಾಧಿಕಾರ ಕಾಂಗ್ರೆಸ್ ಜನತೆಯ ದ್ರೋಹಿ ಇಂದಿರಾರನ್ನು ಸೋಲಿಸಲೇಬೇಕು. "ಕಾಂಗ್ರೆಸ್ ಸೋಲಿಸಿ, ಪ್ರಜಾಸತ್ತೆ ಉಳಿಸಿ, ದೇಶ ರಕ್ಷಿಸಿ" ಘೋಷಣೆ ಮೊಳಗಬೇಕು, ಇದಕ್ಕೆ ಸರ್ವ ಪ್ರಯತ್ನವನ್ನೂ ಮಾಡಬೇಕು.

ವರದಿ : ವಿಶ್ವ ಕುಂದಾಪುರ

ಭೂ ಆಸ್ತಿರಹಿತರಿಗೆ ಮತ ಹಕ್ಕು ನಿರಾಕರಣೆ :

ಸಿ.ಪಿ.ಐ (ಎಂ)ಪಂಜಾಬ್ ರಾಜ್ಯಸಮಿತಿ ತೀವ್ರಖಂಡನೆ

ಪಂಜಾಬ್‌ನಲ್ಲಿ ಭೂ ಆಸ್ತಿ ಇಲ್ಲದಂತಹವರಿಗೆ ಮತದಾನದ ಹಕ್ಕನ್ನು ನಿರಾಕರಿಸಬೇಕೆಂದು ಎಸ್. ಜಿ ಪಿ. ಸಿ. ಧಾರ್ಮಿಕ ಸಂಸ್ಥೆಯ ಅಧ್ಯಕ್ಷ ಗುರುಚರಣಸಿಂಗ್ ತೋಹ್ರಾ ಮಾಡಿರುವ ಸಲಹೆಯನ್ನು ಸಿ.ಪಿ ಐ. (ಎಂ) ಪಂಜಾಬ್ ರಾಜ್ಯ ಘಟಕ ತೀವ್ರವಾಗಿ ಖಂಡಿಸಿದೆ

ತೋಹ್ರ ಅವರ ಸಲಹೆ ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ, ಇದು ತೀವ್ರ ಖಂಡನೀಯ ಎಂದು ಸಿ. ಪಿ. ಐ (ಎಂ) ಪಂಜಾಬ್ ರಾಜ್ಯ ಸಮಿತಿಯ ಪತ್ರಿಕಾ ಹೇಳಿಕೆ ತಿಳಿಸಿದೆ.

ಐಕ್ಯರಂಗ

ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ಚುನಾವಣಾ ಬಹಿಷ್ಕಾರ ಸರಿಯೇ ?

—ಪುರುಷೋತ್ತಮ ಕಲಾಲಬಂಡಿ

ಜನವರಿ 5, 1983 ರಂದು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತ್ರಿಪುರಾ — ಈ ಮೂರು ರಾಜ್ಯಗಳಿಗೆ ವಿಧಾನ ಸಭಾ ಚುನಾವಣೆಗಳು ನಡೆಯಲಿವೆ. ಈಗಾಗಲೇ ಅಧಿಕಾರ ನಡೆಸುತ್ತಿರುವ ರಾಜ್ಯಗಳಲ್ಲಿ 'ರಿವಿವಲ್' ಮಾಡಲು ಕಾಂಗ್ರೆ ತವಕಿಸುತ್ತಿದೆ. ಈ ಸಂದರ್ಭದಲ್ಲಿ ಕೆಲವು ಸಂಘಟನೆಗಳು ಹಾಗೂ ಕೆಲವು ವ್ಯಕ್ತಿಗಳಿಂದ ಚುನಾವಣೆಯನ್ನೆ ಬಹಿಷ್ಕರಿಸಬೇಕೆಂದು ಅಪಾಯಕಾರಿ ಘೋಷಣೆ ಕೇಳಬರುತ್ತಿದೆ.

ತನ್ನ ಜನಾಂಗದವರಿಗೆ ಕಾಂಗ್ರೆ ಟಿಕೇಟು ಸಿಗದ ಕಾರಣ ರಾಜ್ಯದ ಯಾದವ ಜನಾಂಗದ ವೇದಿಕೆಯ ಅಧ್ಯಕ್ಷರಾದ ಶ್ರೀ ರಾಜಾ ತಿಮ್ಮಯ್ಯನವರು 'ಬಹಿಷ್ಕಾರ'ದ ವಾದ ಎತ್ತಿದ್ದಾರೆ. 'ಪ್ರಗತಿಪರ'ರೆಂಬ ಮುಖವಾಡ ಧರಿಸಿದ ಕೆಲವು ಬುದ್ಧಿ ಜೀವಿಗಳು ಕೂಡಾ ಈ ವಾದದ ಅಪಾಯವನ್ನು ತಿಳಿಯದೇ ಇದೇ ಅಪಸ್ವರ ಎತ್ತುತ್ತಿದ್ದಾರೆ. ರುದ್ರಪ್ಪ ನೇತೃತ್ವದ ರೈತ ಸಂಘ, ದಲಿತ ಸಂಘರ್ಷ ಸಮಿತಿಯ ವಿಭಾಗವೊಂದು 'ನಿರ್ಲಿಪ್ತ' ಅಥವಾ 'ಮತದಾನ ಬಹಿಷ್ಕಾರ'ದ ನಿಲುವು ತಳೆದದ್ದು ಇಲ್ಲಿ ನೆನೆಯಬಹುದು.

ಚುನಾವಣೆಯನ್ನು ಬಹಿಷ್ಕರಿಸುವ ವಾದವು ಹೀಗೆ ಸರ್ವಾಧಿಕಾರಿ ಮತ್ತು ಛಿದ್ರಕಾರಿ ಶಕ್ತಿಗಳಿಗೆ ಸಹಾಯ ಆಗುತ್ತದೆಂಬುದನ್ನು ನೋಡೋಣ —

ಇಂದಿರಾ ಪಕ್ಷವು ತಾನು ಅಧಿಕಾರಕ್ಕೆ ಬಂದಂದಿನಿಂದ ಅನುಸರಿಸಿದ ಆರ್ಥಿಕ ನೀತಿಯು, ಆರ್ಥಿಕ ಬಿಕ್ಕಟ್ಟಿನಿಂದ ರಾಜಕೀಯ ಬಿಕ್ಕಟ್ಟಿಗೆ ಅನುವು ಮಾಡಿಕೊಟ್ಟಿದೆ. ರಾಜಕೀಯ-ಸಾಮಾಜಿಕ ಚೌಕಟ್ಟನ್ನು ಅದಕ್ಕೆ ಸರಿಹೊಂದಿಸಲು ಸಂವಿಧಾನವನ್ನು ಸರಾ ತಿದ್ದುಪಡಿ ಮಾಡಲಾಗುತ್ತಿದೆ. ಅದರಲ್ಲೂ 42ನೇ ತಿದ್ದುಪಡಿಯಲ್ಲಿ ಮೂಲಭೂತ ಹಕ್ಕನ್ನೇ ಮೊಟಕಗೊಳಿಸಿದ್ದು, ಪಾರ್ಲಿಮೆಂಟರಿ ವ್ಯವಸ್ಥೆ ಕಾಲದೆ ಅಧ್ಯಕ್ಷ ಮಾದರಿ ತರಲು ಸಣಸಾಟ, ನ್ಯಾಯಾಂಗವನ್ನು ಕಾರ್ಯಾಂಗದ ಅಧೀನದಲ್ಲಿ ತರುವದು, ಮತ್ತು ರಾಷ್ಟ್ರೀಯ ಭದ್ರತಾ ಕಾನೂನು, ಅಗತ್ಯ ಸೇವಾ ಕಾಯ್ದೆ, ತುರ್ತು ಪರಿಸ್ಥಿತಿ ಹೇರಿದ್ದು, ಐ. ಎಂ. ಎಫ್. ಸಾಲದ ಶರತ್ತುಗಳು — ಮುಂತಾದವುಗಳೆಲ್ಲಾ ದುಡಿಯುವ ಜನತೆಯ ಮೇಲೆ ಸರ್ವಾಧಿಕಾರವನ್ನು ಹೇರಲು ಕಾರ್ಯೋನ್ಮುಖವಾಗಿರುತ್ತದೆ.

ಪ್ರಾರಂಭದಲ್ಲಿ ದುಡಿಯುವ ವರ್ಗಕ್ಕಷ್ಟೇ ಸೀಮಿತವಾದ ದಬ್ಬಾಳಿಕೆ, ಬರಬರುತ್ತ ತನ್ನ ಆಕ್ಟೋಪಸ್ ಹಿಡಿತವನ್ನು ಎಲ್ಲೆಡೆ ಚಾಚುತ್ತಿರುವುದನ್ನು ಸಾಸಿಂದು ಕಾಣಬಹುದು. ಮೇನಕಾ ಗಾಂಧಿ ನೇತೃತ್ವದ 'ಮಂಚ'ದ ಮುಖಂಡರನ್ನು ಜೈಲಿಗೆ ಅಟ್ಟಿದ್ದರಲ್ಲಿ, ಇದು ಸಾಲದೆ ತನ್ನ ಪಕ್ಷ (ಕಾಂಗ್ರೈ)ದ ಎಂ. ಎಲ್. ಎ.ಗಳನ್ನು ಸೆರೆಮನೆಗೆ ತಳ್ಳಿದ್ದು ಮತ್ತು ಬಿಹಾರ ಪತ್ರಿಕಾ ಮಸೂದೆ — ಇವುಗಳಲ್ಲಿ ಕಾಣಬಹುದು.

ಈ ಹಿನ್ನೆಲೆಯಲ್ಲಿ ಸರ್ವಾಧಿಕಾರಿ ಇಂದಿರಾ ಪಕ್ಷದ ಮತ್ತು ವಿರೋಧ ಪಕ್ಷಗಳ ಬಲಾಬಲವನ್ನು ಗಮನದಲ್ಲಿಟ್ಟುಕೊಂಡು ವಿಧಾನ ಸೌಧದ ಒಳಗೂ ಮತ್ತು ಹೊರಗೂ ಏಕಕಾಲಕ್ಕೆ ಜನತೆಯನ್ನು ಸಂಘಟಿಸಿ ಹೋರಾಟ ಮಾಡುವದು ಆದ್ಯ ಕರ್ತವ್ಯ ಇರುತ್ತದೆ. ಕಾರಣ ಚುನಾವಣೆಯು ಕೂಡ ಇದ್ದ ಅಲ್ಪಸ್ವಲ್ಪ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸರ್ವಾಧಿಕಾರಿ ಶಕ್ತಿಯ ವಿರುದ್ಧದ ಹೋರಾಟದಲ್ಲಿ ಒಂದು ಅಸ್ತ್ರವನ್ನಾಗಿಸಿಕೊಳ್ಳಬಹುದು. ಇದನ್ನು ಕಡೆಗಣಿಸಿ ಚುನಾವಣೆಗಳನ್ನು ಬಹಿಷ್ಕರಿಸಿದರೆ ಇಂದಿರಾ ಪಕ್ಷಕ್ಕೆ ಬಹಳ ಅನುಕೂಲವಾಗಿ "ಕೈ"ಯನ್ನು ಇನ್ನಷ್ಟು ಶಕ್ತಿಯುತ ಮಾಡಿದಂತಾಗುತ್ತದೆ. ಅಲ್ಲದೆ ಬಹಿಷ್ಕರಿಸುವ ಜನಗಳ ಮತಗಳು ಇಂದಿರಾ ಪಕ್ಷಕ್ಕೆ ಹೋಗದೆ ವಿರೋಧ ಪಕ್ಷಗಳಿಗೆ ಚಲಾಯಿಸಿದ್ದೆ ಆದರೆ ಏಕ ಪಕ್ಷದ ಸರ್ವಾಧಿಕಾರವನ್ನು ಸೋಲಿಸಲು ಸಹಾಯ ಮಾಡಿದಂತಾಗುತ್ತದೆ. ಇಲ್ಲಿ ಬಲ ವಿರೋಧ ಪಕ್ಷಗಳ ವರ್ಗ ಗುಣಧರ್ಮಗಳನ್ನು ನೆನಪಿನಲ್ಲಿಟ್ಟುಕೊಂಡೆ ನಾವು ಚುನಾವಣೆಯಲ್ಲಿ ಮತದಾನ ಮಾಡಬೇಕು. ಇಲ್ಲದಿದ್ದಲ್ಲಿ ಪುನಃ ನಿರುತ್ಸಾಹ, ಜಿಗುಪ್ಸೆ ಬರುವ ಅಪಾಯ ಉಂಟು.

ಇನ್ನೊಂದು ಪ್ರಮುಖ ಅಂಶವೆಂದರೆ, ಸರ್ವಾಧಿಕಾರವನ್ನು ಹೇರಲು ಹೊರಟಿರುವ ಇಂದಿರಾ ಪಕ್ಷವು ಈ ಕಾರ್ಯವನ್ನು ಪೂರ್ತಿಗೊಳಿಸುವಾಗ ಚುನಾವಣೆಯನ್ನು ಬಹಿಷ್ಕರಿಸುವ ಘೋಷಣೆ ಕೊಡಬಹುದು. ಏಕೆಂದರೆ ಈಗಾಗಲೇ ಪ. ಬಂಗಾಲ, ತ್ರಿಪುರದಲ್ಲಿ ಕಾಂಗ್ರೈ ಮುನಿಸಿಪಲ್ ಚುನಾವಣೆಯನ್ನು ಬಹಿಷ್ಕರಿಸಿದ್ದು, ತ್ರಿಪುರಾದಲ್ಲಿ ಸ್ವಯಮಾಡಳಿತ (ಅಟೊನೊಮಸ್) ಜಿಲ್ಲಾ ಚುನಾವಣೆಯ ಬಹಿಷ್ಕಾರದ ಬೆದರಿಕೆ, ಗಡವಾಲ್ ಚುನಾವಣೆ ಮುಂದೂಡಿದ್ದು, ಹರಿಯಾಣಾ ಚುನಾವಣೆಯಲ್ಲಿ ಕಾಂಗ್ರೈ ಬಹುಮತ ಪಡೆದ ರೀತಿ-ನೀತಿ, ಕೇರಳದ ಕಾಂಗ್ರೈ ಸರಕಾರ ಸ್ಪೀಕರ್ ಓಟು ಬಳಸಿದ ವಿಧಾನ, ಅಸ್ಸಾಂ. ಚಳವಳಿಗಾರರ ಚುನಾವಣೆ ಬಹಿಷ್ಕಾರದ ನಿರ್ಧಾರಕ್ಕೆ ಒಳೊಳಗೆ ಸಂತೋಷ-ಹೀಗೆ ಇಂದಿರಾ ಪಕ್ಷವು ಮತದಾನದ ಹಕ್ಕನ್ನು ತೋರಿಕೆಗಾಗಿ ಕೊಟ್ಟಿದ್ದರೂ ನಿಧಾನವಾಗಿ ಅಧಿಕಾರ ಬೇರೆ ವರ್ಗಕ್ಕೆ ಹೋಗುವ ಸಂದರ್ಭದಲ್ಲಿ ಮತ ಚಲಾಯಿಸುವ ಹಕ್ಕನ್ನು ಕಸಿದುಕೊಳ್ಳುವುದಿಲ್ಲವೆಂಬುದು ಯಾವ ಗ್ಯಾರಂಟಿ ?

ಕಾರಣ, ಚುನಾವಣೆಯನ್ನು ಬಹಿಷ್ಕರಿಸಬೇಕೆಂಬ ಕೆಲವು ಸಂಘಟನೆಗಳ ವಾದವು ಪ್ರಸ್ತುತ ಸಮಯದಲ್ಲಿ ಸರ್ವಾಧಿಕಾರಿ ಇಂದಿರಾ ಪಕ್ಷಕ್ಕೇ ಅಪರೋಕ್ಷವಾಗಿ ಸಹಾಯ ಮಾಡಿದಂತಾಗುತ್ತದೆ. ಮತದಾರರು ಎಷ್ಟೇ ಬಹಿಷ್ಕರಿಸಿದರೂ ಇದ್ದ ಮತದಾರರಲ್ಲೆ ಮತ ಚಲಾಯಿಸಿಕೊಂಡು 'ಬಹುಮತ'ದ ಆಧಾರದ ಮೇಲೆ ಜಯ ಘೋಷಿಸಲು "ಜನತಾ ಪ್ರಾತಿನಿಧ್ಯ ಕಾಯ್ದೆ" ಇನ್ನೂ ಬೆಂಬಲ ಕೊಡುತ್ತಲೆ ಇದೆ.

ಮತದಾರರು ದೋಷಪೂರಿತ ಈ ಪ್ರಸಕ್ತ ಚುನಾವಣೆಯ ಬದಲು, 'ಶೇಕಡಾವಾರು ಪ್ರಾತಿನಿಧ್ಯ' ಚುನಾವಣಾ ಪದ್ಧತಿಗೆ ಒತ್ತಾಯಿಸುವುದು ಅತ್ಯಗತ್ಯ. ಶೇಕಡಾವಾರು ಗಳಿಸಿದ ಮತಪ್ರಮಾಣ ವಿರೋಧ ಪಕ್ಷಗಳು ಗಳಿಸಿದ ಮತ ಪ್ರಮಾಣಕ್ಕಿಂತ ಕಡಿಮೆ ಇದ್ದರೂ ಸಂಸತ್ತಿನಲ್ಲಿ 2/3 ಬಹುಮತ ಗಳಿಸುವ ವಿರೋಧಾಭಾಸವನ್ನು ಈ ಪ್ರಸಕ್ತ ಚುನಾವಣಾ ವ್ಯವಸ್ಥೆಯಲ್ಲಿ ಕಾಣಬಹುದು. ಈ ಕಾರಣದಿಂದಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಶೇಕಡಾವಾರು ಪ್ರಾತಿನಿಧ್ಯವಿರುವ ಚುನಾವಣಾ ಪದ್ಧತಿಗೆ ಮೊದಲಿನಿಂದಲೂ ಒತ್ತಾಯಿಸುತ್ತಲೇ ಬಂದಿದೆ.

ಈ ಸಂದರ್ಭದಲ್ಲಿ ಮತದಾರರು 'ಬಹಿಷ್ಕಾರ'ದ ಮನವಿಗೆ ಓಗೊಡದೆ ಇಂದಿರಾ ಪಕ್ಷದ ವಿರುದ್ಧ ಮತ ಚಲಾಯಿಸಿ ಚುನಾವಣೆಯಲ್ಲಿರುವ ಇತಿ-ಮಿತಿಗಳ ಕಲ್ಪನೆ ಇಟ್ಟುಕೊಂಡೇ ಇಡೀ ವ್ಯವಸ್ಥೆಯನ್ನು ಬದಲಾಯಿಸಲು ಸತತವಾಗಿ ಹೋರಾಟ ಮುಂದುವರಿಸಬೇಕು. ಅಲ್ಲದೇ, ಜನತೆ ಇನ್ನೂ ಸಾಕಷ್ಟು ಅಸಂಘಟಿತರಾಗಿದ್ದು, ಅವರ ಪ್ರಜ್ಞೆ ಇಡೀ ವ್ಯವಸ್ಥೆಯನ್ನು ಧಿಕ್ಕರಿಸುವ ಮತ್ತು ಬಹಿಷ್ಕರಿಸುವ ಪ್ರಜ್ಞೆಗೆ ಏರದಿರುವಾಗ ಇಂಥ ಘೋಷಣೆಗಳು ಯಾವ ಪರಿಣಾಮ ಬೀರದೆ, ಬದಲು ಇದೊಂದು ಆತ್ಮಹತ್ಯೆಯ ಇನ್ನೊಂದು ವಿಧಾನವಾಗುವುದು.

●

ಶಿರಾ :

ಪುರಸಭೆಯ ಉಪ ಚುನಾವಣೆಯಲ್ಲಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಚಂಡ ವಿಜಯ

ದಿನಾಂಕ 22-12-82 ರಂದು ಶಿರಾ ಟೌನ್ ಪುರಸಭೆಯ ಎರಡನೇ ಡಿವಿಜನ್‌ಗೆ ನಡೆದ ಉಪಚುನಾವಣೆಗೆ ಸ್ಥಳೀಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯ ಕಾರ್ಯದರ್ಶಿ ಕಾಂ। ಎಸ್. ಕೆ. ಹಬೀಬುಲ್ಲಾರವರು ಮಿಕ್ಕ ಅಭ್ಯರ್ಥಿಗಳನ್ನೆಲ್ಲಾ ಹಿಮ್ಮೆಟ್ಟಿಸಿ ದೊಡ್ಡ ಅಂತರದಿಂದ ಗೆದ್ದಿದ್ದಾರೆಂದು ಇದೀಗ ತಿಳಿದುಬಂದಿದೆ. ಕಾಂಗ್ರೈ ಪಕ್ಷವೇ ಮೊದಲಾಗಿ ಇತರ ಎಲ್ಲಾ ಅಭ್ಯರ್ಥಿಗಳನ್ನು ಇವರು ಸುಮಾರು ಸಾವಿರಕ್ಕಿಂತಲೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿದ್ದಾರೆ. ಇದು ಕಾಂಗ್ರೈ ಪಕ್ಷದ ವಿರುದ್ಧವಾಗಿ ಜನರ ಅಭಿಪ್ರಾಯ ತಿರುಗಿರುವುದಕ್ಕೆ ಸ್ಪಷ್ಟ ಸೂಚನೆ ಎಂದು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕೆ. ಆರ್. ನಾಯಕ್‌ರವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

23 ರಂದು ನಗರದಲ್ಲಿ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಕಾಂ। ಮಹಮ್ಮದ್ ದಸ್ತಗೀರ್ ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ। ದಸ್ತಗೀರ್ ಮತ್ತು ಎಚ್. ಸಿ. ಚೆನ್ನಪ್ಪ ಅವರುಗಳು ಮಾತನಾಡಿ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಿದ್ದಕ್ಕೆ ಜನತೆಯನ್ನು ಅಭಿನಂದಿಸಿದರು.

ಉತ್ತರ ಪ್ರದೇಶ :

ಡಿ.ವೈ.ಎಫ್.ಐ. ರಾಜ್ಯ ಸಮ್ಮೇಳನ

ಇತಿಹಾಸದ ಪ್ರಸಿದ್ಧ 'ಕಾಕೋರಿ' ಪ್ರಕರಣದ ಹುತಾತ್ಮರಾದ ಅಷ್ಫಾಖ್ ಉಲ್ಲಾ, ಲಾಹಿರಿ ಮತ್ತು ರಾಂ ಪ್ರಸಾದ್ ಬಿಸ್ಮಿಲ್‌ರವರ ಹುಟ್ಟೂರಾದ ಉತ್ತರ ಪ್ರದೇಶದ ಶಹಜಹಾನ್‌ಪುರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ನಿನ 5ನೇ ರಾಜ್ಯ ಸಮ್ಮೇಳನ ಡಿಸೆಂಬರ್ 4 ಮತ್ತು 5 ರಂದು ನಡೆದಿದೆ.

ರಾಜ್ಯಾದ್ಯಂತ 30 ಜಿಲ್ಲೆಗಳ 11,037 ಸದಸ್ಯರನ್ನು ಪ್ರತಿನಿಧಿಸುವ 99 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿರುವುದಾಗಿ ವರದಿಯಾಗಿದೆ.

○

೬೦ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ

ಸೋವಿಯತ್ ಜನತೆಗೆ ಶುಭಾಶಯಗಳು

ಸೋವಿಯತ್ ಒಕ್ಕೂಟ ಸ್ಥಾಪನೆಯ ಅರವತ್ತನೆಯ ವರ್ಧಂತಿಯ ಸಂದರ್ಭದಲ್ಲಿ ಸಿ. ಪಿ. ಐ (ಎಂ)ನ ಪೊಲಿಟ್‌ಬ್ಯೂರೋ ಸೋವಿಯತ್ ಜನತೆಗೆ ಮತ್ತು ಸೋವಿಯತ್ ಕಮ್ಯುನಿಸ್ಟ್ ಪಕ್ಷಕ್ಕೆ ತನ್ನ ಶುಭಾಶಯವನ್ನು ವ್ಯಕ್ತಪಡಿಸುತ್ತದೆ. ವಿವಿಧ ಜನಾಂಗಗಳ ದೇಶವನ್ನು ಜನಾಂಗಗಳಿಗೆ ಸಂಪೂರ್ಣ ಸಮಾನತೆಯ ಆಧಾರದ ಮೇಲೆ ಸ್ಥಾಪಿಸಿದ್ದು ಲೆನಿನ್ ಮತ್ತು ಬೊಲ್ಷೆವಿಕ್ ಪಕ್ಷದ ನಾಯಕತ್ವದಲ್ಲಿ ಅಕ್ಟೋಬರ್ ಸಮಾಜವಾದೀ ಕ್ರಾಂತಿಯ ಚರಿತ್ರಾರ್ಹ ಸಾಧನೆಯಾಗಿದೆ.

ಈ ಹಿಂದೆ ಬಂಧೀಖಾನೆಯಾಗಿದ್ದ ಜನಾಂಗಗಳು ಕಾರ್ಮಿಕ ವರ್ಗದ ಕೈಗೆ ಅಧಿಕಾರ ಬಂದೊಡನೆ ತಾವೇ ಸ್ವಯಂ ಪ್ರೇರಣೆಯಿಂದ ಒಂದುಗೂಡಿ ಸಮಾಜವಾದೀ ಗುರಿಸಾಧನೆಯ ಪಾಲುದಾರರಾದರು. ಕಮ್ಯುನಿಸ್ಟ್ ಪಕ್ಷ ಮತ್ತು ಸಮಾಜವಾದೀ ರಾಜ್ಯವು ಸಮಾನತೆಯನ್ನು ಔಪಚಾರಿಕವಾಗಿ ಮಾತ್ರ ಘೋಷಿಸಿದೆ, ಸಮಾನತೆಯನ್ನು ಕಾರ್ಯರೂಪಕ್ಕೆ ತಂದು, ಪಂಚವಾರ್ಷಿಕ ಯೋಜನೆಗಳಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಗಮನ ನೀಡುವ ಮೂಲಕ ಆ ಪ್ರದೇಶಗಳು ತಮ್ಮ ಹಿಂದುಳಿದಿರುವಿಕೆಯ ವಿರುದ್ಧ ಹೋರಾಡಿ ಅಭಿವೃದ್ಧಿ ಹೊಂದಲು ಸಹಾಯ ಮಾಡಿತು. ಕೆಲವೇ ವರ್ಷಗಳಲ್ಲಿ ಈ ಪ್ರದೇಶಗಳು ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿ ಸಾಧಿಸಿವೆ.

ಸಮಾನತೆಯ ಆಧಾರದ ಮೇಲೆ ಒಂದುಗೂಡಿದ ಸೋವಿಯತ್ ಜನತೆಯ ಒಗ್ಗಟ್ಟು ಫ್ಯಾಸಿಸ್ಟ್ ವಿರೋಧಿ ಸಮರದಲ್ಲಿ ಅತ್ಯಂತ ಸ್ಪಷ್ಟವಾಗಿ ಕಂಡುಬಂದಿತು. ಆ ಸಂದರ್ಭದಲ್ಲಿ ತಮ್ಮ ತಾಯ್ನಾಡನ್ನು ರಕ್ಷಿಸಲು ಎಲ್ಲಾ ಜನಾಂಗಗಳೂ ತ್ಯಾಗ ಬಲಿದಾನಗಳನ್ನು ಮಾಡಿದರು. ಇದೇ ಸ್ಫೂರ್ತಿ ಇಂದು ಸೋವಿಯತ್ ಒಕ್ಕೂಟವನ್ನು ಸಾಮ್ರಾಜ್ಯಶಾಹಿಗಳ ಯುದ್ಧೋನ್ಮತ್ತತೆಯ ವಿರುದ್ಧ ಹೋರಾಡಿ ಶಾಂತಿಯನ್ನು ಕಾಪಾಡುವ ದೊಡ್ಡ ಕೋಟೆಯನ್ನಾಗಿ ಮಾರ್ಪಡಿಸಿದೆ.

ಸೋವಿಯತ್ ಒಕ್ಕೂಟದ ಸಮಾಜವಾದೀ ಪ್ರಭುತ್ವದ ಅಡಿಯಲ್ಲಿ ಎಲ್ಲಾ ಜನಾಂಗಗಳೂ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯನ್ನು ಸಾಧಿಸಿವೆ. ಅರ್ಧ ಶತಮಾನದ ಹಿಂದೆ ಅಲೆಮಾರೀ ಸ್ಥಿತಿಯಲ್ಲಿದ್ದವರು ಇಂದು ವಿಜ್ಞಾನ ಮತ್ತು ಕೈಗಾರಿಕೆಗಳ ಮೂಲಕ ಆಧುನಿಕ ಜನಾಂಗವಾಗಿ ರೂಪುಗೊಂಡಿದ್ದಾರೆ.

ಈ ಸಂದರ್ಭದಲ್ಲಿ ಸೋವಿಯತ್ ಜನತೆಗೆ ಹಾಗೂ ಸೋವಿಯತ್ ಕಮ್ಯುನಿಸ್ಟ್ ಪಕ್ಷಕ್ಕೆ ಪೊಲಿಟ್‌ಬ್ಯೂರೋ ಶಾಂತಿ, ಸಮೃದ್ಧಿ ಮತ್ತು ಪ್ರಗತಿಯನ್ನು ಹಾರೈಸುತ್ತದೆ.

●

ಎರಡನೆಯ ಇಪ್ಪತ್ತಂಶದ ಕಾರ್ಯಕ್ರಮ ಮತ್ತು ರೈತಾಪಿ ವರ್ಗ

(2ನೇ ಪುಟದಿಂದ)

ಗುರಿ ಇದೆ. ಆದರೆ ಜೂನ್‌ವರೆಗೆ ಕೇವಲ 52,702ಕ್ಕೆ ಮಾತ್ರ ಶಕ್ತಿ ಒದಗಿಸಲಾಗಿದೆ.

ವಾಸ್ತವಸ್ಥಿತಿ ಹೇಗಿದೆಯೆಂದರೆ ಹೆಚ್ಚು ಶಕ್ತಿ ನೀಡುವ ಬದಲು ವಿದ್ಯುತ್ ಕೊರತೆ, ಕಡಿತ ಹೆಚ್ಚುತ್ತಿದೆ.

ಜೀತರದ್ಧತಿಯ ವೈಫಲ್ಯ

5ನೇ ಅಂಶವು ಜೀತದಾಳುಗಳ ಪುನರ್ ವಸತಿ ಬಗೆಗಿನದು. ಇದರ ಒಳಾರ್ಥ ಈಗ ಕಾಂಗ್ರೆಸ್ ರಾಜ್ಯಗಳಲ್ಲಿ ಜೀತದಾಳುಗಳಿಲ್ಲ, ವಿಮೋಚನೆಯಾದ ಜೀತದಾಳುಗಳ ಸುಧಾರಣೆ ಮಾತ್ರ ಆಗಬೇಕಾಗಿದೆ ಎಂದು ಹೇಳುವ ಸೋಗು. ಪ್ರಖ್ಯಾತ ಪತ್ರಿಕೆಯೊಂದರ ಪ್ರಕಾರ ದಿನೇ ದಿನೇ ಜೀತದಾಳುಗಳನ್ನು ದೇಶದೆಲ್ಲೆಡೆ ಗುರುತಿಸಲಾಗಿದೆ. "1975ರಲ್ಲಿ ಜೀತದಾಳಿನ ಆಚರಣೆ ನಿಲ್ಲಿಸಬೇಕೆಂದು ಆದೇಶ ನೀಡಿದಾಗ, ಹೆಚ್ಚಿನ ರಾಜ್ಯಗಳು ತಮ್ಮಲ್ಲಿ ಜೀತದಾಳುಗಳಿಲ್ಲವೆಂದು ತಿಳಿಸಿದವು. ಆಗ ಒಟ್ಟು ಜೀತದಾಳುಗಳ ಸಂಖ್ಯೆ 1 2 ಲಕ್ಷವೆಂದು ಅಂದಾಜು ಮಾಡಲಾಗಿತ್ತು. ಆರು ವರ್ಷಗಳ ನಂತರದ ಸರ್ವೆ ಪ್ರಕಾರ ಇದು 23 ಲಕ್ಷಕ್ಕೇರಿದೆ. ಇದರ ನಂತರ 1 ಲಕ್ಷ ಜೀತದಾಳುಗಳ ಪುನರ್‌ವಸತಿಯಾಗಿದೆ ಇದು ಅತ್ಯಂತ ನಿಧಾನಗತಿಯ ಪ್ರಗತಿ..."(ಟೈಮ್ಸ್ ಆಫ್ ಇಂಡಿಯಾ 20-9-82) ವಾರ್ತಾ ಖಾತೆಯ ಏಪ್ರಿಲ್ 28ರ ಬುಲೆಟಿನ್ ಪ್ರಕಾರ ಒಟ್ಟು 133,550 ವಿಮೋಚಿತ ಜೀತದಾಳುಗಳಲ್ಲಿ 14,488 ಜನರಿಗೆ ಪುನರ್ ವಸತಿ ಸೌಲಭ್ಯ ಒದಗಿಸಲಾಗಿದೆ. 23 ಲಕ್ಷದಲ್ಲಿ ಕೇವಲ 14,000 ಜನರಿಗೆ ಮಾತ್ರ. ಎಂಥ ಅದ್ಭುತ ಸಾಧನೆ!

ಸಮಸ್ಯಾಪೀಡಿತ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ 8ನೇ ಅಂಶದಲ್ಲಿದೆ. 30 ವರ್ಷಗಳ ಕಾಂಗ್ರೆಸ್ ಆಳ್ವಿಕೆಯನಂತರವೂ ಸಾವಿರಾರು ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಸಿಕ್ಕಿಲ್ಲವೆಂದರೆ ಆ ಸರ್ಕಾರದ ಯೋಜನೆ ಯಾವ ರೀತಿಯದು?

ಆಗಸ್ಟ 19ರ ವಾರ್ತಾ ಖಾತೆಯ ವರದಿ ಪ್ರಕಾರ ಅಂಕಿ ಅಂಶ ಈ ರೀತಿ ಇದೆ.

6ನೇ ಯೋಜನೆ ಗುರಿ	1981-82ರ	1982-83ರ
2,31,000	ಸಾಧನೆ	ಗುರಿ
ಹಳ್ಳಿಗಳು	27,700	35,300

1982-83ರ ಮೊದಲ 3 ತಿಂಗಳಲ್ಲಿ ಕೇವಲ 4,729 ಹಳ್ಳಿಗಳಿಗೆ ಈ ಸೌಲಭ್ಯ ದೊರಕಿತು. ಇನ್ನು ಇದರ ಮೇಲೆ ಟೀಕೆ ಅಗತ್ಯವೆ?

ಬೂರ್ಜ್ವಾ ಭೂಮಾಲಿಕ ಸರ್ಕಾರದ ಆಳ್ವಿಕೆಯಲ್ಲಿ, ಎಲ್ಲಾ ಯೋಜನೆಗಳೂ ಜನ ಸಮುದಾಯಕ್ಕೆ ಪೂರ್ತಿ ಲಾಭ ನೀಡುವುದಿಲ್ಲವೆಂದು ಗೊತ್ತಾಗಿದೆ.

ಲಂಚ ಭ್ರಷ್ಟಾಚಾರ ಇವುಗಳಲ್ಲಿ ಬಹುತೇಕ ಯೋಜಿತ ಹಣ ವಿನಿಯೋಗವಾಗಿದೆ.

ಮಹಾರಾಷ್ಟ್ರದಲ್ಲಿ ಉದ್ಯೋಗ ಭರವಸೆಯ ಕಾರ್ಯಕ್ರಮದ ಕುರಿತು ಸರ್ಕಾರ ನೀಡಿದ ಅತಿಶಯದ ಅಂಕಿ ಅಂಶಗಳಿಂದ ಅಂತರರಾಷ್ಟ್ರೀಯ ಬ್ಯಾಂಕು ಕೂಡಾ ಉತ್ಸಾಹಗೊಂಡಿತು. ಆದರೆ ಈಗ ನಿಜವಾದ ಬಣ್ಣ ಬಯಲಾಗಿದೆ. ದುಲಿಯಾ ಜಿಲ್ಲೆಯ ಪ್ರಾಮಾಣಿಕ ನಿಷ್ಠಾವಂತ ಕಲೆಕ್ಟರ್ ಹೇಳಿದ್ದಾರೆ— ಆ ಜಿಲ್ಲೆಯೊಂದರಲ್ಲೇ ರೂ. 87 ಲಕ್ಷದ ಭ್ರಷ್ಟಾಚಾರ ನಡೆದಿದೆ. ಈ ಅಧಿಕಾರಿಯನ್ನು ಸತ್ಯ ಹೇಳಿದ್ದಕ್ಕೆ ವರ್ಗಾಯಿಸಲಾಯ್ತು. ಸತ್ಯ ಶೋಧನೆಗೆ ಒಂದು ಸಮಿತಿ ನೇಮಕವಾಯ್ತು. ಕಲೆಕ್ಟರನ ಪ್ರಕಾರ ಒಟ್ಟು 5 1/2 ಕೋಟಿ ರೂ. ವೆಚ್ಚದಲ್ಲಿ 87 ಲಕ್ಷ ಭ್ರಷ್ಟಾಚಾರ ನಡೆದಿತ್ತು. ಕಾಂಗ್ರೆಸ್ ಕಾರ್ಯಕರ್ತರಿಂದ ತುಂಬಿದ್ದ ಸಮಿತಿ ಈ ಅಂಕಿಯನ್ನು ಒಪ್ಪಲಿಲ್ಲ. ಆದರೆ ಅಧಿಕ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂದು ಒಪ್ಪಿಕೊಂಡಿತು.

ಈ ಯೋಜನೆಯಲ್ಲಿ 73 ಕಡೆ ಕೂಲಿಗೆ ಸಂಬಂಧಿಸಿದಂತೆ ರೂ. 10.90 ಲಕ್ಷ ದುರುಪಯೋಗ ನಡೆದಿದೆಯೆಂದು ಸಮಿತಿ ಕಂಡುಹಿಡಿಯಿತು. ದುರುಪಯೋಗದ ಬಗ್ಗೆ ದೂರುಗಳನ್ನು ತನ್ನ ಅನುಮತಿಯಿಲ್ಲದೆ ಪೋಲೀಸ್ ಠಾಣೆಗಳಲ್ಲಿ ದಾಖಲು ಮಾಡಬಾರದೆಂದು ಪೋಲೀಸ್ ಸೂಪರಿಂಟೆಂಡೆಂಟ್ ತಿಳಿಸಿದ್ದರೆಂದು ಗೊತ್ತಾಗಿದೆ. ಭ್ರಷ್ಟ ಅಧಿಕಾರಿಗಳನ್ನು ವರ್ಗಾಯಿಸಬೇಕೆಂಬ ಕಲೆಕ್ಟರರ ಆದೇಶ ನಿಧಾನವಾಗಿ ನಡೆಸಲಾಗಿದೆ. ಅಧಿಕೃತ ವರದಿ ಏನೇ ಇದ್ದರೂ ವೆಚ್ಚವಾದ ಕೋಟ್ಯಂತರ ರೂಪಾಯಿಯಲ್ಲಿ ಜನತೆಗೆ ದೊರಕಿದ ಸಹಾಯ ಅತ್ಯಲ್ಪ ಮತ್ತು ವರದಿಯ ಅಂಕಿ ಅಂಶ ಸುಳ್ಳು ಚಿತ್ರವನ್ನು ನೀಡುತ್ತದೆ.

ಎಡರಂಗದ ಪ್ರಾಮಾಣಿಕ ಯತ್ನಗಳು

ಇವೆಲ್ಲ ಕಾಂಗ್ರೆಸ್ ಸರ್ಕಾರದ ಪೊಳ್ಳು ಸಾಧನೆಯನ್ನು ತೋರಿಸಿದರೆ, ಇಸೊ .ದೆಡೆ ವ್ಯಯವಾಡಿದ ಹಣದಲ್ಲಿ ಜನತೆಗೆ ಸಹಾಯ ಹೇಗೆ ನಿಜವಾಗಿಯೂ ಸಿಗುವುದು ಎಂದು ಪ. ಬಂಗಾಳ ತ್ರಿಪುರ ಮತ್ತು ಸಿ ಪಿ ಎಂ. ನೇತೃತ್ವದ ಕೇರಳ ಸರ್ಕಾರ ತೋರಿಸಿ ಕೊಟ್ಟಿವೆ.

ಪ. ಬಂಗಾಳದ ಬಾಗ್ರಾ ಯೋಜನೆಯಿಂದ 1 5 ಮಿಲಿಯ ರೈತರಿಗೆ ಲಾಭ ದೊರಕಿದೆ. ಒಟ್ಟು ಅಧಿಕ ಭೂಮಿಯ 40% ಕ್ಕೂ ಮಿಕ್ಕಿ ಭೂಮಿ ಹಂಚಲಾಗಿದೆ. 1981ರಲ್ಲಿಯೇ ಮಂಜೂರಾದ ಭೂ ಸುಧಾರಣಾ (ತಿದ್ದುಪಡಿ) ಕಾನೂನು ಇನ್ನೂ ರಾಷ್ಟ್ರಪತಿಯವರ ಮಂಜೂರಾತಿ ಪಡೆಯಬೇಕಾಗಿದೆ. ಇದಕ್ಕೆ ಒಪ್ಪಿಗೆ ದೊರಕಿದಲ್ಲಿ ಇನ್ನೂ 4 ಮಿಲಿಯ ಎಕ್ರೆ ಅಧಿಕ ಭೂಮಿ ವಶಪಡಿಸಿಕೊಳ್ಳಬಹುದು ಮತ್ತು ಈಗಿನ ಕಾಯ್ದೆಯಲ್ಲಿನ ಅಡಚಣೆಗಳು ನಿವಾರಣೆಯಾಗುತ್ತವೆ.

ಎಡಪ್ರಜಾಪ್ರಭುತ್ವವಾದಿ, ಬಂಗಾಳ, ತ್ರಿಪುರ, ಕೇರಳ ಸರ್ಕಾರಗಳಲ್ಲಿ ಬಡ ರೈತರು ಮತ್ತು ಕೃಷಿ ಕಾರ್ಮಿಕರಿಗೆ ವೃದ್ಧಾಪ್ಯವೇತನ ಯೋಜನೆ ಆರಂಭಿಸಲಾಗಿದೆ. 11ನೇ ತರಗತಿಯವರೆಗೆ ಉಚಿತ ವಿದ್ಯಾಭ್ಯಾಸವನ್ನು ಬಂಗಾಳದಲ್ಲಿ ತರಲಾಗಿದೆ. ಕೃಷಿ ಕಾರ್ಮಿಕರ ವೇತನ ಈಗ ಬಂಗಾಳದಲ್ಲಿ ದಿನಕ್ಕೆ 9 58 ರೂ.ಗೆ ಏರಿಸಲಾಗಿದೆ.

ಓಣಂ ಹಬ್ಬದ ಕಾಲದಲ್ಲಿ ಸಾರ್ವಜನಿಕ ವಿತರಣೆ ಕ್ರಮದಲ್ಲಿ ಅಗತ್ಯ ವಸ್ತುಗಳನ್ನು ಕುಶಲತೆಯಿಂದ ಪೂರೈಸಿದ ಕೇರಳ ಎಡರಂಗ ಸರ್ಕಾರ ಮನ್ನಣೆಗೆ ಪಾತ್ರವಾಯಿತು.

ಬೂರ್ಜ್ವಾಗಳು ಸಾಧಿಸಿದ್ದೇವೆಂದು ಸುಳ್ಳು ಹೇಳುತ್ತಿರುವಾಗ ಈ ಸರ್ಕಾರಗಳು (ಬಂಗಾಳ, ತ್ರಿಪುರ) ಸಾಧಿಸಿ ತೋರಿಸಿವೆ.

ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ಕೇವಲ ಎಡ ಸರ್ಕಾರಗಳು ಮಾತ್ರ ಯೋಜನೆಯ ವೆಚ್ಚದಿಂದ ಜನತೆಗೆ ಲಾಭದಾಯಕವಾಗುವಂತೆ ಮಾಡಬಲ್ಲುವು. ಉಳಿದ ಕಾಂಗ್ರೆಸ್ ರಾಜ್ಯ ಸರ್ಕಾರಗಳು ವಿಪತ್ತಿನ, ಬಿಕ್ಕಟ್ಟಿನ ಸ್ಥಿತಿಯಿಂದ ಪಾರಾಗಲು ಸ್ವಲ್ಪ ವೆಚ್ಚ ಮಾಡಿ ಜನತೆಯನ್ನು ಆಸೆಯ ಭರವಸೆಯ ಮೇಲೆ ನಿಲ್ಲಿಸಿ, ಆಗಾಗ್ಗೆ ತುಣುಕು ಸಹಾಯ ಮಾಡುವ ನಾಟಕವಾಡುತ್ತವೆ. ಆದ್ದರಿಂದ ಇಂದಿರಾರ ಹೊಸ 20 ಅಂಶಗಳ ಕಾರ್ಯಕ್ರಮ ಏನೂ ಭರವಸೆ ಮೂಡಿಸುವುದಿಲ್ಲ. ಈ ಕಾಂಗ್ರೆಸ್‌ನ ಭ್ರಷ್ಟ ಆಡಳಿತದಿಂದ ಯೋಜನೆಗಳ ಅನ್ವಯ ಹೇಗೆ ಲಾಭ ಪಡೆಯಬಹುದು ಎಂಬುದು ಜನತೆಯ ಚಳುವಳಿಯ ಶಕ್ತಿಯ ಮೇಲೆನಿಂತಿದೆ.

ತೀವ್ರ ಹಾಗೂ ಧೀರ್ಘ ಹೋರಾಟಕ್ಕೆ ಸಿದ್ಧರಾಗಿ

ವಿಮಾ ನೌಕರರಿಗೆ ಕಾಂ| ರಣದಿವೆ ಕರೆ

ಡಿಸೆಂಬರ್ 27 ರಿಂದ 3 ರವರೆಗೆ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ವಿಮಾ ನೌಕರರ ಸಮ್ಮೇಳನವನ್ನು ಸಿ. ಐ. ಟಿ ಯು. ಅಧ್ಯಕ್ಷರಾದ ಕಾಂ| ಬಿ. ಟಿ. ರಣದಿವೆ ಉದ್ಘಾಟಿಸಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಕಾಂ| ಬಿ ಟಿ. ರಣದಿವೆ ಅವರು 'ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಯಶಸ್ವಿಯಾಗಿ ಹೋರಾಟಗಳನ್ನು ಸಂಘಟಿಸಿದ್ದಕ್ಕಾಗಿ ಮತ್ತು ಅತ್ಯಂತ ಉತ್ತಮವಾಗಿ ಸಂಘಟನೆಗೊಂಡಿರುವುದಕ್ಕಾಗಿ, ವಿಮಾ ನೌಕರರ ಸಂಘದ ನಾಯಕತ್ವವನ್ನು ಮತ್ತು ನೌಕರರನ್ನು ಹಾರ್ದಿಕವಾಗಿ ಅಭಿನಂದಿಸಿದರು. ಮುಂದಿನ ಹೋರಾಟಗಳು ಧೀರ್ಘವಾದುದು ಮತ್ತು ಗಂಭೀರವಾದುದೂ ಆಗುವ ಪರಿಸ್ಥಿತಿಯಿದೆ. ನೌಕರರು ಇತರ ವಿಭಾಗಗಳ ಕಾರ್ಮಿಕರೊಂದಿಗೆ ಐಕ್ಯ ಹೋರಾಟಕ್ಕೆ ಸಿದ್ಧರಾಗಬೇಕಾಗಿದೆ. ಜೀವ ವಿಮಾ ಮತ್ತು ಸಾಮಾನ್ಯ ವಿಮಾ ನೌಕರರು ಇತರ ಉದ್ಯಮಗಳ ನೌಕರರಂತೆ ಕೇವಲ ವೇತನಕ್ಕಾಗಿ, ಬೋನಸ್‌ಗಾಗಿ ಮಾತ್ರ ಹೋರಾಟ ಮಾಡದೆ ತಮ್ಮ ಜೀವನವನ್ನು ಹೆಚ್ಚು ಹೆಚ್ಚಾಗಿ ಬಾಧಿಸುತ್ತಿರುವ ಆರ್ಥಿಕ ಹಾಗೂ ಇತರ ನೀತಿಗಳ ತೀರ್ಮಾನಗಳಿಗೆ ಸಂಬಂಧಿಸಿದ ವಿಶಾಲ ಪ್ರಮಾಣದ ಹೋರಾಟಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬೇಕು. ಸದ್ಯದ ಪರಿಸ್ಥಿತಿಯಲ್ಲಿ ತುಂಬಾ ಮುಖ್ಯವಾದುದೆಂದರೆ ತಮ್ಮ ಪ್ರಜ್ಞೆಯನ್ನು ಉದ್ಯಮದ ಮಟ್ಟಕ್ಕೆ ಸೀಮಿತಗೊಳಿಸದೆ ದೇಶದ ವಿಶಾಲ ಚೌಕಟ್ಟಿನಲ್ಲಿ ಕಾರ್ಮಿಕರ, ನೌಕರರ ವರ್ಗ ಪ್ರಜ್ಞೆಗೆ ಪರಿವರ್ತಿಸಿಕೊಳ್ಳಬೇಕು.

ಕಾರ್ಮಿಕ ವರ್ಗವು ಸರ್ಕಾರದ ಕಾರ್ಮಿಕ ವಿರೋಧೀ, ಜನ ವಿರೋಧೀ, ಪ್ರಜಾತಂತ್ರ ವಿರೋಧಿ ಧೋರಣೆಗಳೊಡನೆ ಘರ್ಷಣೆಗೆ ಇಳಿಯುವ ಬದಲು ಐಕ್ಯತೆಯ ಮೂಲಕ, ಹೋರಾಟಗಳ ಮೂಲಕ ಸರ್ಕಾರದ ಧೋರಣೆಗಳನ್ನು ರೂಪಿಸುವ ಕ್ರಿಯೆಯಲ್ಲಿ ನಿರ್ಣಾಯಕವಾಗಿ ಪ್ರವೇಶಿಸಬೇಕೆಂದು ಕಾಂ| ರಣದಿವೆ ತಿಳಿಸಿದರು.

ಬಂಡವಾಳಶಾಹಿಗಳು ಮತ್ತು ಜಮೀನ್ದಾರರು ತಮ್ಮ ಶೋಷಣೆಗೆ ಹೆಚ್ಚಿನ ಅವಕಾಶ ಪಡೆದುಕೊಳ್ಳುವ ಕ್ರಿಯೆಯಲ್ಲಿ ಈಗಾಗಲೇ ಜಾರಿಯಲ್ಲಿರುವ ಕಾನೂನುಗಳ ಮೇಲೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿಯನ್ನು ಪ್ರಾರಂಭಿಸಿದ್ದಾರೆ.

ಇವೆಲ್ಲದರ ಪರಿಣಾಮಗಳನ್ನು ನಾವು ವೇತನ ಹೆಚ್ಚಳ, ಮತ್ತು ತುಟ್ಟಿ ಭತ್ಯೆ ಕುರಿತಂತೆ ಬಿ ಪಿ ಇ. (ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸ್) ಮಂಡಿಸಿರುವ ಮಾರ್ಗ ದರ್ಶನದಲ್ಲಿ ಕಾಣಬಹುದಾಗಿದೆ. ಇದು ಕಾರ್ಮಿಕ ವರ್ಗದ ಮೇಲಿನ ಧಾಳಿಯ ಪ್ರಮುಖ ಅಂಶವಾಗಿದೆ. ಆದ್ದರಿಂದಲೇ ಬಿ. ಪಿ. ಇ. ಮಾರ್ಗದರ್ಶನದ ವಿರುದ್ಧದ ಹೋರಾಟವು ಐಕ್ಯ ಕಾರ್ಮಿಕ ವರ್ಗ ಚಳವಳಿಯ ತಕ್ಷಣದ ಕರ್ತವ್ಯವಾಗಿದೆ. ರಾಷ್ಟ್ರೀಯ ಪ್ರಚಾರ ಸಮಿತಿಯು ಸಾಮೂಹಿಕ ಚೌಕಾಶಿಯ ಹಕ್ಕು ಮತ್ತು ಬಿ. ಪಿ. ಇ ಮಾರ್ಗ ದರ್ಶನದ ವಿರುದ್ಧ ವಿವಿಧ ಕಾರ್ಮಿಕ ಸಂಘಟನೆಗಳನ್ನು ಒಂದುಗೂಡಿಸಿ ನಡೆಸಿದ ಹೋರಾಟದ ಪ್ರಥಮ ಹಂತ. ಜೀವ ವಿಮಾ ಮತ್ತು ಸಾಮಾನ್ಯ ವಿಮಾ ಉದ್ಯಮಗಳಲ್ಲಿ ಸಾಮೂಹಿಕ ಚೌಕಾಶಿಯ ಹಕ್ಕನ್ನು ಸರ್ಕಾರ ಬಹಿರಂಗವಾಗಿಯೇ ವಿರೋಧಿಸಿದೆ. ಬಿ ಪಿ. ಇ. ನ ಪ್ರವೇಶದಿಂದಾಗಿ ಇಂತಹ ಉದ್ಯಮಗಳ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ.

1983 ಜನವರಿ 28 ರಂದು ನಡೆಯಲಿರುವ ಸಾರ್ವಜನಿಕ ಉದ್ಯಮಗಳ ಒಂದು ದಿವಸದ ಮುಷ್ಕರವು, ಕಾರ್ಮಿಕರ ಮೇಲಿನ ಸರ್ಕಾರದ ಆಕ್ರಮಣವನ್ನೂ ಮುಖ್ಯವಾಗಿ ಸಾಮೂಹಿಕ ಚೌಕಾಶಿಯ ಹಕ್ಕಿನ ವಿರುದ್ಧ ಅದು ನಡೆಸುತ್ತಿರುವ ಧಾಳಿಯನ್ನು ಎದುರಿಸುವ ವ್ಯಾಪಕವಾದ ಹೋರಾಟವಾಗಿದೆ. ಈ ಒಂದು ಹೊಸ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಚಾರ ಸಮಿತಿಯು ಸಾಧಿಸಿರುವ ಐಕ್ಯತೆ ಸಾಲದು, ಅದು ಇನ್ನೂ ಹೆಚ್ಚು ವಿಶಾಲ ನೆಲೆಗಟ್ಟು ಪಡೆದುಕೊಂಡು, ಕಾರ್ಮಿಕ ವರ್ಗದ, ಶ್ರಮಜೀವಿ ವರ್ಗದ ಹಿತಾಸಕ್ತಿಗಾಗಿ ಹೋರಾಡುವ ಚಳವಳಿಯಾಗಿ ಬೆಳೆದು ಬರಬೇಕುಎಂಬುದಾಗಿ ಕರೆ ನೀಡಿದರು.

ವಿಮಾ ನೌಕರರು ಅಂತರರಾಷ್ಟ್ರೀಯ ದೃಷ್ಟಿಕೋನವನ್ನು ಬೆಳೆಸಿಕೊಂಡು ಜಗತ್ತಿನ ಇತರ ಭಾಗಗಳಲ್ಲಿ ತುಳಿತಕ್ಕೊಳಗಾಗಿರುವ, ಶೋಷಣೆಯ ವಿರುದ್ಧ ಹೋರಾಟ ನಡೆಸುತ್ತಿರುವ ಜನತೆಯೊಂದಿಗೆ ಸೌಹಾರ್ದ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕು. ವಿಮಾ ನೌಕರರು ಮಧ್ಯಮ ವರ್ಗ ಕಾರ್ಮಿಕರ ಒಂದು ಭಾಗವಾಗಿ ವಿದ್ಯೆಯನ್ನು ಪಡೆದುಕೊಂಡಿದ್ದಾರೆ. ಅವರು ತಮ್ಮ ವಿದ್ಯೆಯನ್ನು ಅವಿದ್ಯಾವಂತ ಕಾರ್ಮಿಕ ಸಮುದಾಯದಲ್ಲಿ ವರ್ಗಪ್ರಜ್ಞೆಯನ್ನು ಮೂಡಿಸಲು ಉಪಯೋಗಿಸಿಕೊಳ್ಳಬೇಕು. ವಿಮಾ ನೌಕರರು ತಮ್ಮ ಹಿತಾಸಕ್ತಿಯ ಕುರಿತಾಗಿಯೇ ಚಿಂತಿಸಿ ಸ್ವಾರ್ಥಿಗಳಾಗಬಾರದು. ಅವರು ಇತರ ಶೋಷಿತ ವಿಭಾಗಗಳ ಅದರಲ್ಲೂ ಮುಖ್ಯವಾಗಿ ರೈತರ ಹೋರಾಟಗಳಿಗೆ ಬೆಂಬಲ ನೀಡಬೇಕೆಂದು ತಿಳಿಸಿದ ಕಾಂ| ರಣದಿವೆಯವರು ಸಮ್ಮೇಳನ ಯಶಸ್ವಿಯಾಗಲೆಂದು ಹಾರೈಸಿದರು.

ರಾಯಚೂರು :

ಟಿ.ಸಿ.ಹೆಚ್, ವಿದ್ಯಾರ್ಥಿಗಳ ಹೋರಾಟ

ಎಸ್ ಎಫ್. ಐ ನ ರಾಯಚೂರು ಘಟಕದ ನೇತೃತ್ವದಲ್ಲಿ ಯರಮರಸ್ ಶಿಕ್ಷಕ ತರಬೇತಿಯ ವಿದ್ಯಾರ್ಥಿಗಳು ಬಸ್ಸುಗಳ ಅವ್ಯವಸ್ಥೆಯನು ಸರಿಪಡಿಸಬೇಕೆಂದು ಒತ್ತಾಯಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಮಾಡಿಕೊಂಡರೂ ಸಹ ಅದನ್ನು ಗಮನಕ್ಕೆ ತೆಗೆದುಕೊಳ್ಳದ ಕಾರಣ ದಿನಾಂಕ 13-12-82 ರಂದು ಯರಮರಸ್ ಶಿಕ್ಷಕ ತರಬೇತಿ ಸಂಸ್ಥೆಗೆ ಹೋದ ಬಸ್ಸುಗಳನ್ನು ಮೂರು ಗಂಟೆಗಳ ಕಾಲ ಅಲ್ಲಿಯೇ ತಡೆಹಿಡಿಯಲಾಯಿತು. ಇದರ ಪರಿಣಾಮವಾಗಿ ಜಿಲ್ಲಾಧಿಕಾರಿಗಳು ಪ್ರತ್ಯೇಕ ಬಸ್ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆಂದು ರಾಯಚೂರು ಘಟಕದ ವರದಿ ತಿಳಿಸಿದೆ

ವಿಚ್ಛಿದ್ರಕಾರಿ ಶಕ್ತಿಗಳಿಗೆ ಬೆಂಬಲ ಕೊಡುವ ಕಾಂಗ್ರೆಯನ್ನು ಸೋಲಿಸಿರಿ

—ಕಾಂ| ಪಿ. ರಾಮಮೂರ್ತಿ

ವಿರೋಧ ಪಕ್ಷಗಳೆಲ್ಲ ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ಕೊಡುತ್ತಿವೆಂದು, ದೇಶದ ಸಮಗ್ರತೆಗೆ ಇದು ಅಪಾಯಕಾರಿಯೆಂದೂ, ಆದ್ದರಿಂದ ಪ್ರತ್ಯೇಕತೆಗೆ ಬೆಂಬಲ ನೀಡುವ ಪ್ರಾದೇಶಿಕ ಮತ್ತು ವಿರೋಧ ಪಕ್ಷಗಳನ್ನೆಲ್ಲ ಸೋಲಿಸಿ ದೇಶದ ಸಮಗ್ರತೆಯನ್ನು ಕಾಪಾಡಬೇಕೆಂದು ಇಂದಿರಾ ಗಾಂಧಿ ಹೇಳುತ್ತಿದ್ದಾರೆ. ವಿರೋಧ ಪಕ್ಷಗಳು ವಿಚ್ಛಿದ್ರಕಾರಿ ಶಕ್ತಿಗಳಿಗೆ ಬೆಂಬಲ ಕೊಡದೆ ಅವುಗಳ ಕುತಂತ್ರದ ವಿರುದ್ಧ ಹೋರಾಡುತ್ತಿರುವಾಗ ಇಂದಿರಾ ಕಾಂಗ್ರೆ ಮಾತ್ರ ಅವುಗಳನ್ನು ಬೆಂಬಲಿಸುತ್ತಿದೆ. ತನಗೆ ಬೇಕಾದಾಗ ಪ್ರಾದೇಶಿಕ, ಜಾತೀಯ, ಧಾರ್ಮಿಕ ಪಕ್ಷ ಮತ್ತು ಶಕ್ತಿಗಳೊಡನೆ ಸೇರಿಕೊಂಡು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ವಿರುದ್ಧ ಆ ಶಕ್ತಿಗಳನ್ನು ಉಪಯೋಗ ಮಾಡಿಕೊಳ್ಳುತ್ತಿದೆ. ಕಾರಣ ದೇಶದ ಸಮಗ್ರತೆಯನ್ನು ಉಳಿಸಿಕೊಳ್ಳಲು ಇಂದಿರಾ ಕಾಂಗ್ರೆಯನ್ನು ಸೋಲಿಸಲೇಬೇಕು" ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡರಾದ ಕಾಂ|| ಪಿ. ರಾಮಮೂರ್ತಿಯವರು ತಾ|| 26 ರಂದು ಬೆಂಗಳೂರಿನ ಮಲ್ಲೇಶ್ವರಂ ಮೈದಾನದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ಸಿ. ಪಿ. ಐ. (ಎಂ), ಬಿ ಜೆ ಪಿ. ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿದೆಂಬ ಆರೋಪವನ್ನು ಅಲ್ಲಗಳೆದು, ಕರ್ನಾಟಕ-ಆಂಧ್ರಗಳ ಹಲವಾರು ಮತ ಕ್ಷೇತ್ರಗಳಲ್ಲಿ ಆರ್. ಎಸ್. ಎಸ್. ನವರನ್ನೊಳಗೊಂಡು ಬಿ. ಜೆ. ಪಿ. ಯವರು ಕಾಂಗ್ರೆಗೆ ಕೆಲಸ ಮಾಡುತ್ತಿರುವುದು ಕಂಡು ಬಂದಿದೆಯೆಂದು ಹೇಳಿದರು.

ಅನಂತರ ರಾಜಾಜಿನಗರ ಮತ್ತು ಯಶವಂತಪುರಗಳಲ್ಲಿ ಭಾರಿ ಸಭೆಗಳಲ್ಲಿ ಇಂದಿರಾ ಗಾಂಧಿಯ ಆರ್ಥಿಕ ನೀತಿಯನ್ನು ಬಯಲಿಗೆಳೆದು, ವಿದೇಶಿ ಸಾಲವಿಲ್ಲದೆ ಆಡಳಿತ ನಡೆಸಿಕೊಂಡು ಹೋಗಲು ಅಸಮರ್ಥರಾದ ಇಂದಿರಾ ಗಾಂಧಿ ಬಲಿಷ್ಠವಾದ ಕೇಂದ್ರಕ್ಕೆ ಮತ ಕೊಡಿರೆಂದು ಕೇಳುವುದು ಹಾಸ್ಯಾಸ್ಪದವೆಂದು ಹೇಳಿದರು. ಜನರಲ್ಲಿಕೊಳ್ಳುವ ಶಕ್ತಿ ಕಡಿಮೆಯಾಗಿದೆಯೆಂದೂ, ಆದರೆ ಬಂಡವಾಳದಾರರು ಕೆಲಸಗಾರರನ್ನು ಹೆಚ್ಚು ದುಡಿಸಿ ಅಪಾರ ಲಾಭಗಳಿಸುತ್ತಿದ್ದಾರೆಂದೂ, ಇಂಥ ಪರಿಸ್ಥಿತಿಯಲ್ಲಿ ಕಾರ್ಮಿಕರು ಹೋರಾಡಬಾರದೆಂದು ಹಲವಾರು ಪ್ರತಿಬಂಧಕ ಕಾನೂನುಗಳನ್ನು ಜ್ಯಾರಿ ಮಾಡಿರುವುದಲ್ಲದೆ, ಕಾರ್ಮಿಕರ ಮೇಲೆ ಅತ್ಯಾಚಾರ ಮಾಡಲಾಗುತ್ತಿದೆಂದೂ, ಆದ್ದರಿಂದ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸುವುದು ಅತ್ಯಗತ್ಯವೆಂದೂ ಹೇಳಿದರು.

ಸಿ. ಪಿ ಐ. (ಎಂ) ಮುಖಂಡರಾದ ಕಾಂ|| ಎನ್. ಕೆ. ಉಪಾಧ್ಯಾಯರು ಭಾಷಣಮಾಡಿ ಮೂರು ತಿಂಗಳ ಮುಂಚಿತವಾಗಿಯೇ ಇಂದಿರಾ ಗಾಂಧಿ ಚುನಾವಣೆ ಮಾಡಲು ನಿರ್ಧರಿಸಿದ ಕಾರಣವನ್ನು ವಿವರಿಸಿ, ಜನರನ್ನು ಕೊಲ್ಲುವ ಇಂದಿರಾ ಪಕ್ಷವನ್ನು ಸೋಲಿಸಬೇಕೆಂದು ಕರೆ ಕೊಟ್ಟರು.

○

ತಮಿಳು ನಾಡು :

ಮುಷ್ಕರ ತಡೆ ಶಾಸನವನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಹೋರಾಟ

ತಮಿಳುನಾಡು ಸರ್ಕಾರ ಜಾರಿಗೆ ತಂದಿರುವ ಮುಷ್ಕರ ನಿಷೇಧ ಶಾಸನವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ರಾಜ್ಯಾದ್ಯಂತ ಲಕ್ಷಾಂತರ ಕಾರ್ಮಿಕರು ನಡೆಸಿದ ಬೃಹತ್ ಮತ ಪ್ರದರ್ಶನಗಳು 22-12-82 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಹಾಗೂ ಪ್ರಮುಖ ಪಟ್ಟಣಗಳಲ್ಲೂ ನಡೆದಿರುವುದಾಗಿ ವರದಿಯಾಗಿದೆ. ಈ ಪ್ರದರ್ಶನಗಳಲ್ಲಿ ಎಲ್ಲ ವಿಭಾಗಗಳ ದುಡಿಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆಂದು ತಿಳಿದು ಬಂದಿದೆ.

ದುಡಿಯುವ ಜನತೆಗೆ ವಿರುದ್ಧವಾದ ಎ ಐ.ಎ.ಡಿ.ಎಂ.ಕೆ ಸರ್ಕಾರದ ಸವಾಲನ್ನು ನಾವು ಎದುರಿಸಲು ಸಿದ್ಧ ಎಂದು ಕಾರ್ಮಿಕರು ಘೋಷಿಸಿದ್ದಾರೆ. ಅಸಂಖ್ಯ ದಬ್ಬಾಳಿಕೆಗಳನ್ನೂ, ಸೆರೆಮನೆ ವಾಸವನ್ನೂ, ಗೂಂಡಾ ಧಾಳಿಗಳನ್ನೂ ಎದುರಿಸಿ ಪಡೆದುಕೊಂಡಿರುವ ಹಕ್ಕುಗಳನ್ನು ಕಸಿದುಕೊಳ್ಳಲು ಪ್ರಯತ್ನಿಸುವ ಎ.ಐ.ಎ.ಡಿ.ಎಂ.ಕೆ. ಸರ್ಕಾರದ ಮುಷ್ಕರ ತಡೆ ಶಾಸನವನ್ನು ವಾಪಸ್ ತೆಗೆದುಕೊಳ್ಳುವವರೆಗೂ ಹೋರಾಟ ದೃಢವಾಗಿ ಮುಂದುವರಿಸುತ್ತೇವೆಂದು ಕಾರ್ಮಿಕರು ತೀರ್ಮಾನಿಸಿದ್ದಾರೆ.

●

೧೬-೧೨-೮೨ ರಂದು ತೋಟ ಕಾರ್ಮಿಕರ ಯಶಸ್ವಿ ಮುಷ್ಕರ

ತಾ| 11-12-1982 ರಂದು ಬೆಂಗಳೂರಿನಲ್ಲಿ ಕಾರ್ಮಿಕ ಕಮಿಷನರ್‌ರವರ ಕಛೇರಿಯಲ್ಲಿ ತೋಟ ಕಾರ್ಮಿಕ ಸಂಘಗಳ ಮತ್ತು ತೋಟ ಮಾಲೀಕರ ಸಂಘಗಳ ಮಧ್ಯೆ ಒಂದು ಒಪ್ಪಂದವಾಯಿತು. ಈ ಒಪ್ಪಂದವು ತಾರೀಕು 27-11-82 ರಂದು ಕರ್ನಾಟಕ ತೋಟ ಕಾರ್ಮಿಕ ಸಂಘಗಳು ಒಟ್ಟು ಸೇರಿ ಕೈಗೊಂಡ ತೀರ್ಮಾನಕ್ಕೆ ವಿರುದ್ಧವಾಗಿಯೂ, ತೋಟ ಕಾರ್ಮಿಕರ ಹಿತಗಳನ್ನು ಬಲಿಕೊಟ್ಟು ಅವರಿಗೆ ದ್ರೋಹ ಬಗೆಯುವ ರೀತಿಯಲ್ಲಿದ್ದುದರಿಂದ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿರುವ ಸಿ. ಐ. ಟಿ. ಯು. ಮತ್ತು ಎ.ಐ ಟಿ.ಯು.ಸಿ ಗೆ ಸೇರಿದ ಸಂಘಗಳು ಈ ಒಪ್ಪಂದಕ್ಕೆ ಸಹಿ ಮಾಡಲಿಲ್ಲ. 27-11-82 ರಂದು ತೀರ್ಮಾನಿಸಿದ ಹಾಗೆ ತೋಟ ಕಾರ್ಮಿಕರ ಸಂಬಳ ಹೆಚ್ಚಾಗಬೇಕು, ತುಟ್ಟಿ ಭತ್ತೆ ಸಿಕ್ಕಬೇಕು, ವೈದ್ಯಕೀಯ ಸೌಲಭ್ಯಗಳು ಸಿಕ್ಕಬೇಕು ಇತ್ಯಾದಿ ಬೇಡಿಕೆಗಳಿಗಾಗಿ 16-12-82 ರಿಂದ ಮುಷ್ಕರ ನಡೆಸಬೇಕೆಂದು ತೀರ್ಮಾನಿಸಿದ್ದಂತೆ ಹೋರಾಟವನ್ನು ಮುಂದುವರೆಸಲು ತೀರ್ಮಾನಿಸಲಾಯಿತು.

ಅದರಂತೆ 16-12-82 ರಂದು ಸಿ. ಐ. ಟಿ. ಯು. ಸದಸ್ಯರು ಇರುವ ಎಲ್ಲಾ ತೋಟಗಳಲ್ಲೂ ಯಶಸ್ವಿ ಮುಷ್ಕರ ನಡೆಯಿತು. ಆ ದಿನ ನೂರಾರು ಜನ ತೋಟ ಕಾರ್ಮಿಕರು ವಿವಿಧ ಭಾಗಗಳಿಂದ ಕಾಲ್ನಡಿಗೆ ಜಾಥಾ ಮೂಲಕ ಸಕಲೇಶಪುರಕ್ಕೆ ಬಂದು ಬೃಹತ್ ಮೆರವಣಿಗೆಯನ್ನು ನಡೆಸಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡರು. 15-12-82 ರಂದು ಸಿ.ಐ.ಟಿ.ಯು. ರಾಜ್ಯ ಮಂಡಳಿ ಸದಸ್ಯ ಕಾಂ| ದೂಜರವರ ಮೇಲೆ ಸಂಗಪ್ಪ ಎಂಬ ತೋಟದ ಮಾಲೀಕ ಮತ್ತು ಅವನ ಮಕ್ಕಳು ಸೇರಿ ಕಟ್ಟಿ ಹಾಕಿ ಹೊಡೆದಿದ್ದುದರ ವಿರುದ್ಧ ಕಾರ್ಮಿಕರು ರೋಷದಿಂದ ಘೋಷಣೆಗಳನ್ನು ಕೂಗುತ್ತಿದ್ದರು. ಎ.ಐ.ಟಿ.ಯು ಸಿ.ಗೆ ಸೇರಿದ ಕಾರ್ಮಿಕರು ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ ಯು. ರಾಜ್ಯ ಸಮಿತಿ ಸದಸ್ಯರುಗಳಾದ ಕಾಂ| ಎ.ಸಿ.ಕೇಶವ, ಕಾಂ| ವಿ.ಸುಕುಮಾರ್, ಕಾಂ| ಜಿ. ಎಸ್. ರಾಘವೇಂದ್ರ, ಎ.ಐ.ಟಿ.ಯು ಸಿ.ಯ ಕಾಂ ರೇಣುಕಾರಾಧ್ಯ, ಕಾಂ. ಗುಣಶೇಖರ ಮಾತನಾಡಿ ಕಾರ್ಮಿಕ ದ್ರೋಹಿ ಕಾರ್ಮಿಕ ಸಂಘಗಳ ನೀತಿಯನ್ನು ಉಗ್ರವಾಗಿ ಖಂಡಿಸಿದರು. ಕೂಡಲೇ ಕಾರ್ಮಿಕ ಕಮಿಷನರ್‌ರವರು ಮಾತುಕತೆಗೆ ಕರೆದು ನ್ಯಾಯವಾದ ಸಂಬಳದ ಒಪ್ಪಂದ ಮಾಡಬೇಕೆಂದು ಒತ್ತಾಯಿಸಿದರು.

16ರ ಮುಷ್ಕರ ಯಶಸ್ವಿಯಾಗಿದ್ದು 17 ರಿಂದ ಮುಷ್ಕರವನ್ನು ಮುಂದೂಡುವ ತೀರ್ಮಾನ ಕೈಗೊಂಡು, ಸರಕಾರ ಮುಂದಿನ ದಿನಗಳಲ್ಲಿ ಸರಿಯಾದ ಒಂದು ಒಪ್ಪಂದಕ್ಕೆ ಬಾರದಿದ್ದರೆ ಮುಂದಿನ ಹೋರಾಟದ ಕಾರ್ಯಕ್ರಮ ರೂಪಿಸಲು ತೀರ್ಮಾನಿಸಿ ಸಭೆಯನ್ನು ಮುಕ್ತಾಯ ಮಾಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ ಯು ವಿನ ಕಾಂ| ಕೃಷ್ಣ ಮೇಸ್ತ್ರಿ ವಹಿಸಿದ್ದರು.

●

ವಿರೋಧ ಪಕ್ಷಗಳಿಗೆ ಉಜ್ವಲ ಅವಕಾಶವಿದೆ

—ಕಾಂ| ಇ. ಎಂ. ಎಸ್.

ತ್ರಿಪುರಾ, ಆಂಧ್ರ, ಕರ್ನಾಟಕಗಳ ಒಟ್ಟು ಪರಿಸ್ಥಿತಿಯು ವಿರೋಧ ಪಕ್ಷಗಳ ಪರವಾಗಿದೆ. ಬದಲಾವಣೆಯ ಗಾಳಿ ಕಾಂಗ್ರೆಸ್ (ಐ) ವಿರುದ್ಧವಾಗಿ ಬೀಸುತ್ತಿದೆ. ಕಾಂಗ್ರೆಸ್ (ಐ)ನಲ್ಲಿ ಎಲ್ಲಾ ಕಡೆಗಳಲ್ಲೂ ದುರ್ಬಲತೆ ಮತ್ತು ಆಂತರಿಕ ಕಚ್ಚಾಟಗಳು ಕಂಡು ಬರುತ್ತಿವೆ. ಮತ್ತೊಂದು ಕಡೆ ವಿರೋಧ ಪಕ್ಷಗಳ ನಡುವೆ ಸಹಕಾರ ಬೆಳೆಯುತ್ತಿದೆ ಎಂಬುದಾಗಿ ತ್ರಿಪುರಾ, ಆಂಧ್ರಗಳ ಚುನಾವಣಾ ಪ್ರವಾಸ ಮುಗಿಸಿ ಈಗ ಕರ್ನಾಟಕದಲ್ಲಿ ಪ್ರವಾಸ ಮಾಡುತ್ತಿರುವ ಸಿ. ಪಿ. ಐ. (ಎಂ)ನ ಪ್ರಧಾನ ಕಾರ್ಯದರ್ಶಿ ಕಾಂ| ಇ. ಎಂ. ಎಸ್. ನಂಬೂದಿ ಪಾದ್ ಅವರು ಡಿಸೆಂಬರ್ 29 ರಂದು ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡುತ್ತಾ, ತಿಳಿಸಿದ್ದಾರೆ.

ಸೈನ್ಯ ಮತ್ತು ಪೋಲೀಸು ಬಹಿರಂಗವಾಗಿಯೇ ಕಾಂಗ್ರೆಗೆ ಬೆಂಬಲ ನೀಡುತ್ತಿರುವುದು ತೀರಾ ಅಪಾಯಕಾರೀ ಬೆಳವಣಿಗೆಯಾಗಿದೆಯೆಂಬ ಅಭಿಪ್ರಾಯವನ್ನು ಕಾಂ| ಇ. ಎಂ. ಎಸ್. ವ್ಯಕ್ತಪಡಿಸಿದ್ದಾರೆ.

ಜನರಲ್ ವೈದ್ಯ ಅವರು ತ್ರಿಪುರಾದಲ್ಲಿ ಕಾಂಗ್ರೆ ಮತ್ತು ತ್ರಿಪುರಾ ಉಪಜಾತಿ ಜುಬಾ ಸಮಿತಿಯ ನಡುವಿನ ಮೈತ್ರಿಯನ್ನು ಸ್ವಾಗತಿಸಿ ರಾಜ್ಯದ ಕಾನೂನು ಮತ್ತು ಶಿಸ್ತು ಪಾಲನೆಯ ಕುರಿತು ರಾಜಕೀಯ ಹೇಳಿಕೆ ನೀಡಿದ್ದು ಮತ್ತು ಕರ್ನಾಟಕದ ಚುನಾವಣಾ ಕಾರ್ಯಗಳಲ್ಲಿ ಡಿ.ಐ.ಜಿ. (ಇಂಟೆಲಿಜೆನ್ಸ್) ಕಾರ್ತಿಕೇಯನ್ ಅವರು ಮಧ್ಯ ಪ್ರವೇಶಿಸುತ್ತಿರುವುದನ್ನು ಉಲ್ಲೇಖಿಸಿದ ಕಾಂ| ಇ. ಎಂ. ಎಸ್. ಇದು ಸಾಧಾರಣ ವಿಚಾರವಲ್ಲ. ಇದರ ಪರಿಣಾಮ ತುಂಬಾ ಗಂಭೀರವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಬಾರಿ ಕಾಂಗ್ರೆಸ್ (ಐ) ಪಕ್ಷವು ಚುನಾವಣೆಯಲ್ಲಿ ಅತ್ಯಂತ ಕಠಿಣ ಹೋರಾಟವನ್ನು ಎದುರಿಸುತ್ತಿದೆ.

ಸಿ ಪಿ ಐ. (ಎಂ) ಪಕ್ಷವು ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುವುದು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವ ಉದ್ದೇಶದಿಂದಲೇ ಎಂಬುದಾಗಿ ಕಾಂ| ಇ. ಎಂ. ಎಸ್. ಹೇಳಿದ್ದಾರೆ.

○

ರಾಜ್ಯ ಸಮಿತಿ ಸ್ವಾಗತ

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ (ಐ) ಸರ್ಕಾರವನ್ನು ಸೋಲಿಸಬೇಕೆಂಬ ಶ್ರೀ ರುದ್ರಪ್ಪನವರ ನಾಯಕತ್ವದ ರೈತ ಸಂಘ ತೀರ್ಮಾನವನ್ನು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಮತ್ತು ರಾಜ್ಯ ಸಮಿತಿ ಸ್ವಾಗತಿಸಿದೆ.

ನಮ್ಮ ಸಂಗಾತಿಗಳ ನಾಯಕತ್ವದ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಇಡೀ ರೈತ ವರ್ಗ ಅನೇಕ ಪೋಲೀಸ್ ಗೋಲೀಬಾರುಗಳಿಗೆ ಬಲಿಯಾಗಿದ್ದಾರೆ. ಸುಮಾರು 130 ಮಂದಿ ಸಾವಿಗೀಡಾಗಿದ್ದಾರೆ, ಮತ್ತು ರಾಜ್ಯದ ವಿವಿಧ ಕೇಂದ್ರಗಳಲ್ಲಿ ಸಾವಿರಾರು ರೈತರು ಬಂಧನಕ್ಕೊಳಗಾಗಿದ್ದಾರೆ.

ತಮ್ಮ ಸಂಘದ ಸದಸ್ಯರು ತಟಸ್ಥರಾಗಿ ಉಳಿದು ತಮಗಿಷ್ಟ ಬಂದವರಿಗೆ ಮತ ನೀಡಬಹುದೆಂಬ ತೀರ್ಮಾನವನ್ನು ಈ ಹಿಂದೆ ಕೈಗೊಂಡಿತ್ತು. ಆದರೆ ಈಗ ಜನತೆಯ ಮಧ್ಯೆ ಗುಂಡೂರಾವ್ ಸರ್ಕಾರದ ವಿರುದ್ಧ ಎದ್ದಿರುವ ಅತೃಪ್ತಿಯ ಅಲೆ ಶ್ರೀ ರುದ್ರಪ್ಪನವರ ಮತ್ತಿತರ ರೈತ ಸಂಘದ ನಾಯಕರ ಕಣ್ಣು ತೆರೆಸಿ ಕಾಂಗ್ರೆ ಆಡಳಿತವನ್ನು ಸೋಲಿಸಬೇಕೆಂದು ತನ್ನ ಸದಸ್ಯರಿಗೆ ಕರೆ ನೀಡಿದೆ. ಸಂಘವು ಇದೇ ನಿಲುವನ್ನು ಬಲವಾಗಿ ಅನುಸರಿಸಿದಲ್ಲಿ ಭ್ರಷ್ಟ, ರೈತ ವಿರೋಧೀ ಕಾಂಗ್ರೆಸ್ (ಐ) ಸರ್ಕಾರವನ್ನು ಸೋಲಿಸಲು ವಿರೋಧ ಪಕ್ಷಗಳಿಗೆ ಖಂಡಿತವಾಗಿಯೂ ಸಹಾಯ ಮಾಡುತ್ತದೆಂದು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

Printed & Published by P. Ramachandra Rao by him on behalf of the Communist Party of India Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K V. Temple Street, Sultanpet, B 560 053 Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO